ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ನ್ಯಾಷನಲ್ ಹೈಸ್ಕೂಲು


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಟಿ.ಕೆ. ತಿಮ್ಮರಾಜ ಶೆಟ್ಟಿ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**NATIONAL HIGH SCHOOL:** An Introducing Book on the Places in Karnataka that Played a Major Role in the Freedom Struggle, Written by T.K. Timmaraja Shetty, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಟಿ.ಕೆ. ತಿಮ್ಮರಾಜ ಶೆಟ್ಟಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೬೪


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಮಾರಂಭದ ಪೂರ್ವಭಾವಿ ಚಟುವಟಿಕಗಳು ದೇಶಾದ್ಯಂತ ನಡೆಯುತ್ತಿವೆ. ಈ ಸಂಭ್ರಮ ಜನರ ಪಾಲ್ಗೊಳ್ಳುವಿಕೆಯ ಸ್ಫೂರ್ತಿಯೊಂದಿಗೆ ಮಹೋತ್ಸವವನ್ನು ಜನ–ಉತ್ಸವವಾಗಿ ಆಚರಿಸಲಾಗುತ್ತಿದೆ. ಮಹಾತ್ಮಗಾಂಧಿ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಲಿದಾನ ಮಾಡಿದ ಮಹಾನ್ ನಾಯಕರನ್ನು ಸ್ಮರಿಸುವುದು ಎಲ್ಲರ ಕರ್ತವ್ಯ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂದರೆ ಸ್ವಾತಂತ್ರ್ಯದ ಅಮೃತ, ಅದು ಸ್ವಾತಂತ್ರ್ಯಯೋಧರ ಸ್ಫೂರ್ತಿಯ ಅಮೃತ; ಹೊಸ ಕಲ್ಪನೆಗಳ ಅಮೃತ ಮತ್ತು ಆತ್ಮ ನಿರ್ಭರತೆಯ ಸಂಕಲ್ಪದ ಅಮೃತ.

ಸ್ವಾತಂತ್ರ್ಯ ಸಂಗ್ರಾಮದ ಮಹತ್ತರ ಕ್ಷಣಗಳು; ೧೮೫೭ರ ಪ್ರಥಮ ಸ್ವಾತಂತ್ರ್ಯ ಹೋರಾಟ, ಮಹಾತ್ಮಗಾಂಧಿ ವಿದೇಶದಿಂದ ಮರಳಿದ್ದು, ದೇಶಕ್ಕೆ ಸತ್ಯಾಗ್ರಹದ ಶಕ್ತಿ ನೀಡಿದ್ದು, ಲೋಕಮಾನ್ಯ ತಿಲಕರಿಂದ ಸಂಪೂರ್ಣ ಸ್ವರಾಜದ ಘೋಷಣೆ, ನೇತಾಜಿ ಸುಭಾಶ್‌ಚಂದ್ರ ಬೋಸ್ ನೇತೃತ್ವದ ಆಜಾದ್ ಹಿಂದ್‌ಫೌಜ್‌ನಿಂದ ದೆಹಲಿ ಚಲೋ ಘೋಷಣೆ. ಸ್ವಾತಂತ್ರ ಚಳುವಳಿಯ ಆ ಕಿಡಿಯನ್ನು ಪ್ರತಿಯೊಂದು ದಿಕ್ಕಿನಲ್ಲಿಯೂ, ಪ್ರತಿಯೊಂದು ಪ್ರದೇಶದಲ್ಲಿಯೂ ನಿರಂತರವಾಗಿ ಜಾಗೃತಗೊಳಿಸುವ ಕೆಲಸವನ್ನು ನಮ್ಮ ಆಚಾರ್ಯರು, ಸಂತರು ಮತ್ತು ಶಿಕ್ಷಕರು ದೇಶದ ಮೂಲೆ ಮೂಲೆಯಲ್ಲಿ ಮಾಡಿದ್ದಾರೆ.

ಆ ನಿಟ್ಟಿನಲ್ಲಿಯೇ ಬೆಂಗಳೂರಿನಲ್ಲಿ ಅನಿಬೆಸೆಂಟ್ ಮತ್ತಿತರ ದೇಶಾಭಿಮಾನಿಗಳು ಸ್ಥಾಪಿಸಿದ "ನ್ಯಾಷನಲ್ ಹೈಸ್ಕೂಲ್" ದೇಶೀಯ ಪ್ರೌಡಶಾಲೆ ಮುಖ್ಯವಾದುದು. ನ್ಯಾಷನಲ್ ಹೈಸ್ಕೂಲಿನ ಸ್ಥಾಪನೆಯಲ್ಲಿ ಸ್ವಾತಂತ್ರ್ಯಯೋಧರ ಕಲ್ಪನೆ, ಪರಿಕಲ್ಪನೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ವ್ಯಕ್ತಿಗಳ ಬಗ್ಗೆ

ಕಥನ, ಈ ಕೃತಿಯಲ್ಲಿ ಮೂಡಿಸಲು ಅವಕಾಶ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯವರಿಗೆ ಕೃತಜ್ಞತಾ ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ವಾಚಕ ಮಹಾಶಯರು ಈ ಕೃತಿಯನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆ ಎಂಬ ಆಶಯ ನನ್ನದು.

ದಿನಾಂಕ: ೨೦-೧೨-೨೦೨೧

**ಟಿ.ಕೆ. ತಿಮ್ಮರಾಜ ಶೆಟ್ಟಿ**
ಬೆಂಗಳೂರು

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ನ್ಯಾಷನಲ್ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ಹೋರಾಟ | ೧೫ |
| ಸ್ವದೇಶಿ ಶಾಲೆಯ ಬೀಜಾಂಕುರ | ೧೫ |
| ಬಸವನಗುಡಿಯಲ್ಲಿ ಸ್ಥಾಪನೆಗೊಂಡ ನ್ಯಾಷನಲ್ ಹೈಸ್ಕೂಲು | ೧೮ |
| ಕಾಂಗ್ರೆಸ್ಸಿನ ಚಟುವಟಿಕೆಗಳ ಕೇಂದ್ರವಾದ ನ್ಯಾಷನಲ್ ಹೈಸ್ಕೂಲು | ೨೦ |
| ಜನಗಳ ಗೌರವಕ್ಕೆ ಪಾತ್ರವಾದ 'ಗಾಂಧೀ ಸ್ಕೂಲ್' | ೨೧ |
| ರಾಷ್ಟ್ರೀಯ ಚಳುವಳಿಗಳ ಕೇಂದ್ರ ನ್ಯಾಷನಲ್ ಕಾಲೇಜು | ೨೨ |
| ಗಾಂಧೀಜಿ ಪ್ರಭಾವಕ್ಕೊಳಗಾದ ಎಚ್.ನರಸಿಂಹಯ್ಯನವರು | ೨೫ |
| ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿ | ೨೯ |
| ಚಳುವಳಿಗೆ ಧುಮುಕಿದ ಬಿಸಿರಕ್ತದ ಯುವಕ! | ೩೧ |
| ಗಾಂಧೀಜಿಯವರ ಉಪವಾಸ ಸತ್ಯಾಗ್ರಹಕ್ಕೆ ಬೆಂಗಳೂರಿನಿಂದ ಬೆಂಬಲ | ೩೪ |

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಇತರ ಮಹನೀಯರು ೩೭
ಸಂಸ್ಥಾನದಲ್ಲಿ ಪತ್ರಿಕೆಗಳ ಪ್ರಭಾವ ೪೨
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೦

# ನ್ಯಾಷನಲ್ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ಹೋರಾಟ

ನಮ್ಮ ದೇಶವನ್ನು ಬ್ರಿಟಿಷರು ಸುಮಾರು ೧೮ನೆಯ ಶತಮಾನದ ಮಧ್ಯಭಾಗದಿಂದ ಆಳಲು ಪ್ರಾರಂಭಿಸಿದರು. ಹಲವು ದಶಕಗಳ ನಂತರ ಬ್ರಿಟಿಷರಿಂದ ನಮ್ಮ ದೇಶದ ಆಡಳಿತದಲ್ಲಿ ಹೆಚ್ಚಿನ ಅಧಿಕಾರವನ್ನು ಪಡೆಯುವ, ನಮ್ಮ ದೇಶವನ್ನು ಸ್ವತಂತ್ರಗೊಳಿಸಬೇಕೆನ್ನುವ ಹಂಬಲ ನಮ್ಮ ಜನರಲ್ಲಿ ಮೂಡಲು ಆರಂಭವಾಯಿತು. ೧೮೫೭ ರಲ್ಲಿ ದೇಶಾದ್ಯಂತ ಸ್ಫೋಟಗೊಂಡ ಕ್ರಾಂತಿಯು ಉತ್ತಮವಾದ ನಾಂದಿಯನ್ನು ಹಾಕಿತು. ಅದನ್ನು ಬ್ರಿಟಿಷರು ಸಿಪಾಯಿ ದಂಗೆ ಎಂದು ಕರೆದು, ಅದನ್ನು ಅಮಾನುಷವಾಗಿ ದಮನ ಮಾಡಿದರು.

ಕೆಲವು ವರ್ಷ ತಣ್ಣಗಾದ ಸ್ವಾತಂತ್ರ್ಯದ ಪ್ರಯತ್ನಗಳು, ಸ್ವಲ್ಪ ಸಮಯದ ನಂತರ ಅಹವಾಲುಗಳು, ಪ್ರಾರ್ಥನಾ ಪತ್ರಗಳು, ವಿನಂತಿಗಳು, ಇತ್ಯಾದಿಗಳ ರೂಪದಲ್ಲಿ ಮೊಳಕೆಯೊಡೆಯಿತು. ಆಡಳಿತದಲ್ಲಿ ನಮ್ಮವರಿಗೇ ಹೆಚ್ಚಿನ ಭಾಗವನ್ನು ಕೊಡಬೇಕೆಂದು ದೇಶಾಭಿಮಾನಿಗಳು, ಪ್ರಜ್ಞಾವಂತರು ಬ್ರಿಟಿಷರಿಗೆ ಮನವಿ ಮಾಡಿಕೊಳ್ಳುವ, ಕೆಲವೊಮ್ಮೆ ಒತ್ತಾಯಿಸುವ ಪ್ರಕ್ರಿಯೆ ಕ್ರಮೇಣ ಹೆಚ್ಚಾಗಲಾರಂಭಿಸಿತು.

## ಸ್ವದೇಶಿ ಶಾಲೆಯ ಬೀಜಾಂಕುರ

ಅನಿಬೆಸೆಂಟ್, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕೇಳಿ ಬರುವ ಒಂದು ಪ್ರಮುಖ ಹೆಸರು. ಐರಿಷ್ ಮೂಲದ ಈ ಮಹಿಳೆ ಜನಿಸಿದ್ದು ೧೮೪೭ರ ಅಕ್ಟೋಬರ್ ೧ ರಂದು ಲಂಡನ್ನಿನಲ್ಲಿ. ಮುಂದೆ ಥಿಯಾಸಫಿಕಲ್ ಸೋಸೈಟಿಯ ಸ್ಥಾಪಕರಾದ ಎಚ್.ಬಿ.ಬ್ಲಾವಟ್ಸ್ಕಿ ಅವರ ಪ್ರಭಾವಕ್ಕೆ ಒಳಗಾದ ಆನಿಬೆಸೆಂಟ್, ಥಿಯಾಸಫಿಕಲ್ ಸೊಸೈಟಿಯ ಸದಸ್ಯರಾದರು. ಆಕೆ ಮೊದಲ ಬಾರಿಗೆ ಭಾರತಕ್ಕೆ ಬಂದದ್ದು ೧೮೯೩ ರಲ್ಲಿ. ಭಾರತವು ಗುಲಾಮಿ

ದೇಶವಾಗಿರುವುದನ್ನು ಅವರಿಗೆ ಸಹಿಸಲಾಗಲಿಲ್ಲ. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಹೋರಾಡುವಂತೆ ಭಾರತೀಯರಿಗೆ ಪ್ರೇರೇಪಣೆ ನೀಡಬೇಕೆಂದು ಆಕೆ ಸಂಕಲ್ಪಿಸಿದರು. ಆ ನಿಮಿತ್ತವಾಗಿ, ಆಕೆ ರಾಷ್ಟ್ರೀಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ಬಾಲಗಂಗಾಧರ ತಿಲಕರಂತಹ ಗಣ್ಯರ ಮಾರ್ಗದರ್ಶನದಲ್ಲಿ ೧೯೧೬ ರಲ್ಲಿ "ಹೋಂ ರೂಲ್ ಲೀಗ್" ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಹೋಂರೂಲ್ ಚಳುವಳಿಯನ್ನು ಪ್ರಾರಂಭಿಸಿದರು. ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿದ್ದುಕೊಂಡೇ, ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ನಮ್ಮ ದೇಶದ ಆಡಳಿತವನ್ನು ನಮ್ಮವರು ನಡೆಸುವಂತಾಗಬೇಕೆಂಬುದು ಚಳುವಳಿಯ ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ ಜನರಲ್ಲಿ ದೇಶಪ್ರೇಮವನ್ನು ಜಾಗೃತಗೊಳಿಸಲು ಮತ್ತು ಯುವಕರು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಲು ಹೋಂ ರೂಲ್ ಲೀಗ್ ಹಲವು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಹಮ್ಮಿಕೊಂಡಿತು. ಅದರ ಒಂದು ಭಾಗವಾಗಿ ದೇಶದ ಹಲವು ಕಡೆ ರಾಷ್ಟ್ರೀಯ ಶಾಲೆ (ನ್ಯಾಷನಲ್ ಹೈಸ್ಕೂಲು) ಗಳನ್ನು ಸ್ಥಾಪಿಸುವ ಕಾರ್ಯ ಮೊದಲಾಯಿತು. ಮೊತ್ತಮೊದಲ ಶಾಲೆ ಪ್ರಾರಂಭವಾದದ್ದು ಬನಾರಸ್‌ನಲ್ಲಿ, ಅದರ ಹೆಸರು 'ಹಿಂದೂ ಸ್ಕೂಲ್'. ಇದೇ ರೀತಿಯ ಶಾಲೆಗಳು ಮದ್ರಾಸಿನಲ್ಲಿ ಮತ್ತು ಮದನಪಲ್ಲಿಯಲ್ಲಿ ಪ್ರಾರಂಭವಾದವು.

ಅನಿಬೆಸೆಂಟರು ಇಂತಹ ಒಂದು 'ನ್ಯಾಷನಲ್ ಹೈಸ್ಕೂಲ್' ಅನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಯೋಚಿಸಿದರು. ಇದಕ್ಕೆ ಸ್ವತಃ ಥಿಯಾಸಫಿಸ್ಟ್‌ರಾದ ಬೆಂಗಳೂರಿನ ನ್ಯಾಯಮೂರ್ತಿ ಕೆ.ಎಸ್.ಚಂದ್ರಶೇಖರ ಅಯ್ಯರ್ ಅವರ ಪ್ರೇರಣೆಯೂ ಇದ್ದಿರಬಹುದು. ಬೆಂಗಳೂರಿನ ಗಣ್ಯರೊಂದಿಗೆ ಸಮಾಲೋಚನೆ ನಡೆಸಿದ ಮೇಲೆ ಸಿಟಿ ಮಾರ್ಕೆಟ್ ಸಮೀಪದಲ್ಲಿರುವ ಜನೋಪಕಾರಿ ದೊಡ್ಡಣ್ಣ ಶೆಟ್ಟರ ಮಾಧ್ಯಮಿಕ ಶಾಲಾ ಆವರಣವನ್ನು ೧೯೧೭ನೇ ಇಸವಿಯಲ್ಲಿ ಮದ್ರಾಸಿನ ಥಿಯಾಸಫಿಕಲ್ ಎಜುಕೇಶನ್ ಟ್ರಸ್ಟ್ (Theosophical Education Trust) ಮೂಲಕ ಸೊಸೈಟಿಗೆ ನೀಡಿದರು. ಈ ಆವರಣದಲ್ಲಿ 'ಎಸ್.ಎಲ್.ಎನ್ ನ್ಯಾಷನಲ್ ಹೈಸ್ಕೂಲ್' ಎಂಬ ಹೆಸರಿನಿಂದ ಶಾಲೆಯು ಪ್ರಾರಂಭವಾಯಿತು. ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಪದವಿ ಶಿಕ್ಷಣವನ್ನು ಪೂರೈಸಿದ್ದ ಎನ್.ಎಸ್.ರಾಮರಾವ್ ಅವರು ಶಾಲೆಯ ಮೊದಲ ಮುಖ್ಯೋಪಾಧ್ಯಾಯರಾದರು. ಶಾಲೆಗೆ ಮದ್ರಾಸಿನಿಂದ ಥಿಯಾಸಫಿಕಲ್ ಸೊಸೈಟಿಯವರು ಉತ್ತಮ ಮಟ್ಟದ ಅಧ್ಯಾಪಕರನ್ನು ಕಳುಹಿಸಿದರು – ಶ್ರೀ ಎಸ್.ಅನಂತನಾರಾಯಣ ಅಯ್ಯರ್, ಶ್ರೀ ಎಸ್.ಕಲ್ಯಾಣಸುಂದರಂ ಮತ್ತು ಶ್ರೀ ಎನ್.ಶ್ರೀರಾಮ್ (ಮುಂದೆ ಥಿಯಾಸಫಿಕಲ್ ಸೊಸೈಟಿ ಅಂತರಾಷ್ಟ್ರೀಯ ಅಧ್ಯಕ್ಷರಾಗಿ ೩೦ ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿದವರು) ಅವರುಗಳು ಪ್ರಾರಂಭದಲ್ಲಿ ಬಂದ ಅಧ್ಯಾಪಕರುಗಳು. ದೇಶಾಭಿಮಾನಿ ಆನಿಬೆಸೆಂಟರ ಮತ್ತು ಅಧ್ಯಾಪಕರುಗಳ ವಿಶೇಷ ಪ್ರಯತ್ನದಿಂದ ಮೊದಲ ವರ್ಷವೇ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಗೆ ಸೇರಿದರು.





Dr. Annie Besant who Started the SLN National High School in 1917

ಆದರೆ, ಮೊದಲ ವರ್ಷ ಮುಗಿಯುತ್ತಿದ್ದಂತೆಯೇ ಸಮಸ್ಯೆಯೊಂದು ಎದುರಾಯಿತು. ಜನೋಪಕಾರಿ ದೊಡ್ಡಣ್ಣ ಶೆಟ್ಟಿ ಅವರಿಗೂ ಥಿಯಾಸಫಿಕಲ್ ಸೊಸೈಟಿಯ ಮುಖ್ಯಸ್ಥರಿಗೂ ಭಿನ್ನಾಭಿಪ್ರಾಯಗಳು ಮೂಡಿ, ದೊಡ್ಡಣ್ಣ ಶೆಟ್ಟರು ಥಿಯಾಸಫಿಕಲ್ ಸೊಸೈಟಿಗೆ ನೀಡಲಾಗಿದ್ದ ಆವರಣವನ್ನು ಹಿಂಪಡೆದುಕೊಂಡು ಬಿಟ್ಟರು. ಪರಿಣಾಮವಾಗಿ, ಶಾಲೆಯು ಮುಚ್ಚುವ ಸ್ಥಿತಿಗೆ ಬಂದಿತು. ಆ ಸಂದರ್ಭದಲ್ಲಿ, ನಗರದ ವಿಶಾಲ ಮನೋಭಾವದ ವಿದ್ಯಾಭಿಮಾನದಿಂದ ಕೂಡಿದ ಮೂವರು ಪ್ರಜ್ಞಾವಂತ ಮಹನೀಯರು ಶಾಲೆಯನ್ನು ಮುಂದುವರೆಸಲು ಸಹಾಯಹಸ್ತ ನೀಡಿದರು – ಎಣ್ಣೆಯ ಕಾರ್ಖಾನೆ ಮಾಲೀಕರು ಮತ್ತು ನಗರ ಸಭೆಯ ಅಧ್ಯಕ್ಷರೂ ಆಗಿದ್ದ ಬಿ.ಕೆ.ಗರುಡಾಚಾರ್, ವಾಣಿಜ್ಯೋದ್ಯಮಿಗಳಾದ ಶ್ರೀ ಎಂ.ರಾಮಚಂದ್ರರಾವ್ ಸಿಂಧ್ಯಾ ಮತ್ತು ಎಸ್.ಕೆ.ನರಸಿಂಹಯ್ಯನವರು. ಥಿಯಾಸಫಿಕಲ್ ಸೋಸೈಟಿ ಎಜುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿಯವರಾದ ಶ್ರೀ ಅರ್ನೆಸ್ಟ್ ಅವರಿಗೆ ನಾಲ್ಕು ಸಾವಿರ ರೂಪಾಯಿಗಳಷ್ಟು ಮೊತ್ತವನ್ನು ನೀಡಿ, ಶಾಲೆಯನ್ನು ಮುಂದುವರೆಸುವಂತೆ ಕೇಳಿಕೊಂಡರು. ಈ ಹಣದ ಸಹಾಯದಿಂದ ಹೊಸ ತರಗುಪೇಟೆಯಲ್ಲಿ ಶ್ರೀ ಅಗರಂ ರಾಮರೆಡ್ಡಿಯವರ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ೧೯೧೮ ಜೂನ್ ತಿಂಗಳಿಂದ ಮೂರು ತಿಂಗಳು ಥಿಯಾಸಫಿಕಲ್ ಎಜುಕೇಶನ್ ಟ್ರಸ್ಟ್‌ನ ಆಶ್ರಯದಲ್ಲಿಯೇ ಹೊಸ ಜಾಗದಲ್ಲಿ ಶಾಲೆ ನಡೆಯಿತು. ಆದರೆ, ಮೂರು ತಿಂಗಳ ನಂತರ ಥಿಯಾಸಫಿಕಲ್ ಎಜುಕೇಶನ್ ಟ್ರಸ್ಟ್‌ನವರು ಶಾಲೆಯನ್ನು ನಡೆಸಲು ಆಗುವುದಿಲ್ಲವೆಂದು ಹಿಂದೆ ಸರಿದರು. ಆಗ, ಮೇಲೆ ತಿಳಿಸಿದ ಮೂವರು ಮಹನೀಯರೊಂದಿಗೆ ರಾವ್ ಬಹದ್ದೂರ್ ಕೃಷ್ಣ ಅಯ್ಯಂಗಾರ್, ಶ್ರೀ ದೇವರಾವ್ ಶಿವರಾಂ, ಶ್ರೀ ಕೆ.ಎಸ್.ಕೃಷ್ಣಯ್ಯರ್ ಮತ್ತು ಶ್ರೀ ಎನ್.ಶ್ಯಾಮೇಗೌಡ ಅವರುಗಳೂ ಸಮಿತಿಯಲ್ಲಿ ಸೇರಿಕೊಂಡು ಶಾಲೆಯು ಮುಂದುವರೆಯಿತು.

## ಬಸವನಗುಡಿಯಲ್ಲಿ ಸ್ಥಾಪನೆಗೊಂಡ ನ್ಯಾಷನಲ್ ಹೈಸ್ಕೂಲು

ಒಂದು ವರ್ಷವಾದ ನಂತರ ಸಮಿತಿಯು ಸಭೆ ಸೇರಿ, ಶಾಲೆಯು ಯಾವುದೇ ಅಡ್ಡಿ–ಆತಂಕಗಳಿಲ್ಲದೆ ಸುಸೂತ್ರವಾಗಿ ನಡೆದುಕೊಂಡು ಹೋಗಬೇಕೆನ್ನುವ ಉದ್ದೇಶದಿಂದ ಸಾಕಷ್ಟು ಚಿಂತನ–ಮಂಥನ ನಡೆಸಿ, 'ದಿ



ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಮೈಸೂರು' ಎಂಬ ಸಂಸ್ಥೆಯು ೧೯೧೯ ಮಾರ್ಚ್ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಪ್ರಪ್ರಥಮ ಅಧ್ಯಕ್ಷರಾಗಿ ಮೈಸೂರು ರಾಜ್ಯದ ಚೀಫ್ ಇಂಜಿನಿಯರ್ ಆಗಿದ್ದ ಬಹದ್ದೂರ್ ಕೃಷ್ಣ ಅಯ್ಯಂಗಾರ್ ಅವರು ಆಯ್ಕೆಗೊಂಡರು. ೧೯೨೪ ರಲ್ಲಿ ಇಂದಿನ ಬಸವನಗುಡಿ ಆವರಣಕ್ಕೆ ಶಾಲೆಯನ್ನು ಸ್ಥಳಾಂತರಿಸಲಾಯಿತು. ಶಾಲೆಯನ್ನು ನಡೆಸುತ್ತಿದ್ದವರು ರಾಷ್ಟ್ರೀಯ ಮನೋಭಾವದಿಂದ ಪ್ರೇರಿತರಾಗಿದ್ದರು. ಅಧ್ಯಾಪಕರಲ್ಲಿ ಹೆಚ್ಚಿನವರು ಖಾದಿ ಉಡುಪು ಧರಿಸಿ, ಗಾಂಧಿ ಟೋಪಿಯನ್ನು ಹಾಕಿಕೊಂಡು ಬರುತ್ತಿದ್ದರು. ವಿದ್ಯಾರ್ಥಿಗಳು ಕೂಡ ಶಾಲೆಗೆ ಗಾಂಧಿ ಟೋಪಿ ಹಾಕಿಕೊಂಡು ಬರುವುದು ಕಡ್ಡಾಯವಾಗಿತ್ತು. ಡ್ರಿಲ್ ತರಗತಿಗಳಿಗೆ ನೀಲಿ ಚಡ್ಡಿ, ಬಿಳಿ ಅಂಗಿ ಮತ್ತು ಗಾಂಧಿ ಟೋಪಿ.



ಅಧ್ಯಾಪಕರು ರಾಜಕೀಯ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸುತ್ತಿರಲಿಲ್ಲ. ಆದರೆ, ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಅನುಸರಿಸುತ್ತಿದ್ದರು. ಕೆಲವು ಉಪಾಧ್ಯಾಯರೂ, ವಿದ್ಯಾರ್ಥಿಗಳೂ ತಕಲಿಯಲ್ಲಿ ಚರಕಾದಲ್ಲಿ ನೂಲು ತೆಗೆಯುತ್ತಿದ್ದರು. ಇವರಲ್ಲಿ ಪ್ರಮುಖರು ಶ್ರೀ ಕೆ.ಸಂಪದ್ಗಿರಿರಾಯರು ಮತ್ತು ಶ್ರೀ ಎಚ್.ರಾಮರಾಯರು. ೧೯೨೬ ರಲ್ಲಿ 'ಚರಕ ಸಂಘ'ವು ಶಾಲೆಯಲ್ಲಿ ಪ್ರಾರಂಭವಾಯಿತು. ಗಾಂಧಿ ಜಯಂತಿಯ

ದಿನ ೨೪ ಗಂಟೆಗಳ ಕಾಲ ಅಖಂಡ ಸೂತ್ರಯಜ್ಞವನ್ನು ನಡೆಸುತ್ತಿದ್ದರು. ಹಾಗೆಯೇ, ಏಪ್ರಿಲ್ ೬ ರಿಂದ ಪ್ರಾರಂಭವಾದ ಜಲಿಯನ್ ವಾಲಾಭಾಗ್ ನೆನಪಿನಲ್ಲಿ ನಡೆದ ಏಳು ದಿನಗಳ "ರಾಷ್ಟ್ರೀಯ ಸಪ್ತಾಹ" ಆಚರಣೆಯಲ್ಲಿಯೂ ನೂಲುವುದಕ್ಕೆ ಅಗ್ರಸ್ಥಾನ. ಇಂತಹ ಹಲವು ದಿನಗಳಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಸೂರ್ಯೋದಯಕ್ಕೆ ಮೊದಲು ರಾಷ್ಟ್ರೀಯ ನಾಯಕರ ಭಾವಚಿತ್ರಗಳೊಂದಿಗೆ ದೇಶಭಕ್ತಿ ಗೀತೆಗಳನ್ನು ಹಾಡಿಕೊಂಡು ಶಾಲೆಯ ಸುತ್ತಮುತ್ತಲಿನ ಬೀದಿಗಳಲ್ಲಿ ಪ್ರಭಾತ್ ಪೇರಿ ನಡೆಸುತ್ತಿದ್ದರು.

## ಕಾಂಗ್ರೆಸ್ಸಿನ ಚಟುವಟಿಕೆಗಳ ಕೇಂದ್ರವಾದ ನ್ಯಾಷನಲ್ ಹೈಸ್ಕೂಲು

೧೯೨೪ ನೆಯ ಇಸವಿಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ಅದೇ ಹೊತ್ತಿಗೆ ಡಾ॥ ಎನ್.ಎಸ್.ಹರ್ಡೀಕರ್ ಅವರು 'ಹಿಂದೂಸ್ತಾನಿ ಸೇವಾದಳ' ಎಂಬ ರಾಷ್ಟ್ರೀಯ ಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ಡಾ॥ ಎನ್.ಎಸ್.ಹರ್ಡೀಕರ್ ಅವರಿಗೂ ಶಾಲೆಗೂ ನಿಕಟ ಸಂಪರ್ಕವಿತ್ತು. ಶಾಲೆಯಲ್ಲಿ ಸೇವಾದಳಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು. ಇದರಿಂದ ತರಬೇತಾದ ೫೦ ಮಂದಿ ಸ್ವಯಂಸೇವಕರು ಶಾಲೆಯ ಅಧ್ಯಾಪಕರಾದ ಶ್ರೀ ಎಚ್. ರಾಮರಾವ್ ಅವರ ನೇತೃತ್ವದಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲೂ ಸೇವೆ ಸಲ್ಲಿಸಿ, ಗಾಂಧೀಜಿಯವರ ಮತ್ತು ಉಳಿದ ನಾಯಕರ ಮೆಚ್ಚುಗೆಗೆ ಪಾತ್ರರಾದರು. ಶಾಲೆಯ ಸ್ವಯಂಸೇವಕರಿಗೆ ವಹಿಸಿದ ಕೆಲಸ ಶೌಚಾಲಯದ ಸ್ವಚ್ಛತೆ ಮತ್ತು ಶಿಬಿರದ ನಿರ್ಮಲೀಕರಣ; ಇದರ ನೇತೃತ್ವ ವಹಿಸಿದ್ದವರು ಶ್ರೀ ಕಾಕಾ ಕಾಲೇಲ್ಕರ್‌ರವರು.

ಗಾಂಧೀಜಿಯವರು ಬೆಂಗಳೂರಿಗೆ ಬಂದು ವಾಸ್ತವ್ಯ ಮಾಡಿದಾಗಲೆಲ್ಲ ಶಾಲೆಯ ಸ್ವಯಂಸೇವಕರು ಗಾಂಧೀಜಿಯವರ ಸೇವೆಯಲ್ಲಿ ನಿರತರಾಗುತ್ತಿದ್ದರು. ೧೯೨೭ ನೆಯ ಇಸವಿ ಜುಲೈ ತಿಂಗಳಿನಲ್ಲಿ 'ದಕ್ಷಿಣ ಭಾರತ ಖಾದಿ ಪ್ರದರ್ಶನ'ವನ್ನು ಶಾಲೆಯಲ್ಲಿ ಏರ್ಪಡಿಸಲಾಯಿತು. ರಾಜಾಜಿ ಎಂದೇ ಸುಪ್ರಸಿದ್ಧರಾದ ಸಿ.ರಾಜಗೋಪಾಲಚಾರಿಯವರು ಆ ಪ್ರದರ್ಶನದ ಮುಖ್ಯ ನಿರ್ದೇಶಕರು. ಗಾಂಧೀಜಿಯವರು ಶಾಲೆಯಲ್ಲಿ ಒಂದೆರಡು ದಿನ ತಂಗಿದ್ದರು. ಪ್ರದರ್ಶನವನ್ನು ಅವರೇ ಉದ್ಘಾಟಿಸಿದ್ದರು. ೧೯೨೭ ರಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿಯೂ ಶಾಲೆಯ ಸ್ವಯಂಸೇವಕರು ಸೇವೆ ಸಲ್ಲಿಸಿದರು. ಗಾಂಧೀಜಿಯವರು ನಂದಿಬೆಟ್ಟದಲ್ಲಿ ಕೆಲವು ತಿಂಗಳುಗಳ ಕಾಲ ವಿಶ್ರಾಂತಿಯಲ್ಲಿದ್ದಾಗಲೂ ಮತ್ತು ನಂತರದಲ್ಲಿ ಕುಮಾರಕೃಪಾದಲ್ಲಿ ತಂಗಿದ್ದಾಗಲೂ ಶಾಲೆಯ ವಿದ್ಯಾರ್ಥಿಗಳು ಅವರ ಸೇವೆ ಮಾಡಿದ್ದರು. ಗಾಂಧೀಜಿಯವರು ಬೆಂಗಳೂರಿನಿಂದ ಹಿಂದಿರುಗಿದ ಮೇಲೆ ಅವರ ಆಪ್ತ ಕಾರ್ಯದರ್ಶಿ ಶ್ರೀ ಮಹದೇವ್ ದೇಸಾಯಿಯವರು ಗಾಂಧೀಜಿಯವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಶಾಲೆಯ ಸ್ವಯಂಸೇವಕರ ಬಗ್ಗೆ ಬರೆಯುತ್ತಾ, "ಬೆಂಗಳೂರಿನ ಸ್ವಯಂಸೇವಕರನ್ನು ನೆನಪಿಸಿಂಡಾಗ ಅಪರಂಜಿ (ಅಪ್ಪಟ ಚಿನ್ನ) ನೆನಪಾಗುತ್ತದೆ" ಎಂದು ಮುಕ್ತಕಂಠದಿಂದ ಶ್ಲಾಘಿಸಿದರು.



## ಜನಗಳ ಗೌರವಕ್ಕೆ ಪಾತ್ರವಾದ 'ಗಾಂಧೀ ಸ್ಕೂಲ್'

ಬೆಂಗಳೂರಿನಲ್ಲಿ ೧೯೩೪ ರಲ್ಲಿ ನಡೆದ ಸ್ವದೇಶಿ ಪ್ರದರ್ಶನ, ಅದೇ ವರ್ಷ ನಡೆದ ಶೈಕ್ಷಣಿಕ ಪ್ರದರ್ಶನ, ೧೯೩೫ ರಲ್ಲಿ ನಡೆದ ಖಾದಿ ಗ್ರಾಮೋದ್ಯೋಗ ಪ್ರದರ್ಶನ – ಇವುಗಳ ವ್ಯವಸ್ಥೆಯಲ್ಲಿ ಶಾಲೆಯ ವಿದ್ಯಾರ್ಥಿಗಳು ಪ್ರಧಾನ ಪಾತ್ರ ವಹಿಸಿದರು. ಗಾಂಧೀಜಿಯವರ ದರ್ಶನಕ್ಕಾಗಿ ಶಾಲೆಯ ವಿದ್ಯಾರ್ಥಿಗಳು ಬೆಂಗಳೂರಿನ 'ರೇಸ್ ವ್ಯೂ' ಮೈದಾನಕ್ಕೆ ೧೧–೬–೧೯೩೬ ರಲ್ಲಿ ಹೋಗಿದ್ದಾಗ ಶ್ರೀಯುತ ಎಚ್.ನರಸಿಂಹಯ್ಯನವರೂ ವಿದ್ಯಾರ್ಥಿಯಾಗಿ ಹೋಗಿದ್ದರು. ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಖಾದಿ ಉಡುಪು, ಗಾಂಧೀಜಿಯವರೊಂದಿಗೆ ನಿಕಟ ಸಂಪರ್ಕ, ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ, ಸ್ವಯಂಸೇವಕರ ಸೇವಾ ಕಾರ್ಯಗಳು, ಮುಂತಾದ ಕಾರಣಗಳಿಂದ ಶಾಲೆಯನ್ನು ಸಾರ್ವಜನಿಕರು 'ಗಾಂಧಿ ಸ್ಕೂಲ್' ಎಂದೇ ಗುರುತಿಸುತ್ತಿದ್ದರು.

ಶಾಲೆಯ ಸ್ವಯಂಸೇವಕರ ಸೇವಾಕಾರ್ಯಗಳು ಗಾಂಧೀಜಿ, ಕಾಂಗ್ರೆಸ್ ಅಧಿವೇಶನ, ಖಾದಿ, ಮುಂತಾದ ಪ್ರದರ್ಶನಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಬೆಂಗಳೂರಿನ ದೊಡ್ಡ ದೊಡ್ಡ ಸಾರ್ವಜನಿಕ ಸಮಾರಂಭಗಳಲ್ಲಿ ಸ್ವಯಂಸೇವಕರು ಸೇವೆ ಸಲ್ಲಿಸಿ ಜನರ ಮೆಚ್ಚುಗೆಗೆ ಪಾತ್ರರಾದರು. ಸುಭಾಷ್ ಚಂದ್ರ ಬೋಸರ ಹಿರಿಯ ಸಹೋದರರಾದ ಶ್ರೀ ಶರತ್ ಚಂದ್ರ ಬೋಸರಿಗೆ ಬೆಂಗಳೂರಿನ

ಪುರಸಭೆ ಬಿನ್ನವತ್ತಳೆಯನ್ನು ನೀಡಿದ ಕಾರ್ಯಕ್ರಮದಲ್ಲೂ ಶಾಲೆಯ ವಿದ್ಯಾರ್ಥಿಗಳು ಸೇವೆ ಸಲ್ಲಿಸಿದರು. ಶಾಲೆ ಮೊದಲಾಗಿನಿಂದಲೂ ರಾಷ್ಟ್ರೀಯ ನಾಯಕರು ಮತ್ತು ಉಳಿದ ಕ್ಷೇತ್ರಗಳ ಪ್ರಮುಖರು ಬೆಂಗಳೂರಿಗೆ ಬಂದಾಗಲೆಲ್ಲ ಶಾಲೆಯನ್ನು ತಪ್ಪದೆ ಸಂದರ್ಶಿಸುತ್ತಿದ್ದರು. ಶಾಲೆಯಲ್ಲಿನ ರಾಷ್ಟ್ರೀಯ ವಾತಾವರಣವನ್ನು ಅಧ್ಯಾಪಕರ ಮನೋಭಾವವನ್ನು ನೋಡಿ ಸಂತೋಷಪಡುತ್ತಿದ್ದರು. ಗಾಂಧೀಜಿಯವರು ಶಾಲೆಯ ವಿದ್ಯಾರ್ಥಿಗಳಿಗಾಗಿ ಸ್ಥಾಪಿಸಲ್ಪಟ್ಟ ಕೃಷ್ಣಸ್ವಾಮಿ ವ್ಯಾಯಾಮಶಾಲೆಯ ಉದ್ಘಾಟನೆಯನ್ನು ಮಾಡಿದರು. ರಾಷ್ಟ್ರನಾಯಕರಾದ ರಾಜಾಜಿಯವರು "ಇಂಡಿಯಾ ದೇಶದ ಭೂಪಟದಲ್ಲಿ ನಾನು ಮೆಚ್ಚುವ ಸ್ಥಳಗಳನ್ನು ಕೆಂಪು ಬಣ್ಣದಿಂದ ಗುರುತಿಸಿದ್ದೇನೆ. ನ್ಯಾಷನಲ್ ಹೈಸ್ಕೂಲನ್ನು ಅತಿ ದಟ್ಟವಾದ ಕೆಂಪು ಬಣ್ಣದಿಂದ ಗುರುತಿಸುತ್ತೇನೆ" ಎಂದು ಪ್ರಶಂಸಿಸಿದ್ದಾರೆ. ಶ್ರೀ ಕೆ.ಎಂ.ಮುನ್ಷಿ, ಡಾ॥ ಆರ್.ವಿ.ಪರಾಂಜಪೆ, ಆಚಾರ್ಯ ಪಿ.ಸಿ.ರೇ, ಕಮಲಾದೇವಿ ಚಟ್ಟೋಪಾಧ್ಯಾಯ, ಗಂಗಾಧರರಾವ್ ದೇಶಪಾಂಡೆ, ಕಾಕಾಸಾಹೇಬ್ ಕಾಲೇಲ್ಕರ್, ಜಯಪ್ರಕಾಶ್ ನಾರಾಯಣ್, ರೈಟ್ ಆನರೆಬಲ್ ವಿ.ಎಸ್.ಶ್ರೀನಿವಾಸಶಾಸ್ತ್ರಿ, ಜಮ್ನಾದಾಸ್ ದ್ವಾರಕಾದಾಸ್, ಮುಂತಾದ ರಾಷ್ಟ್ರೀಯ ಮುಖಂಡರು ಶಾಲೆಗೆ ಭೇಟಿ ನೀಡಿ ದೇಶಾಭಿಮಾನವನ್ನು ತುಂಬಿರುತ್ತಾರೆ.

ಶಾಲೆಯು ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳಿಗೆ ನೇರ ಸಂಬಂಧ ಹೊಂದಿರದಿದ್ದರೂ, ಶಾಲೆಯ ರಾಷ್ಟ್ರೀಯ ಮನೋಭಾವ, ಗಾಂಧೀಜಿ ಮತ್ತು ಇತರ ರಾಷ್ಟ್ರ ನಾಯಕರೊಂದಿಗೆ ಸಂಪರ್ಕ, ಮುಂತಾದ ಕಾರಣಗಳಿಂದ ಸರ್ಕಾರಕ್ಕೆ, ಸರಕಾರದ ಗುಪ್ತದಳಕ್ಕೆ (CID) ಶಾಲೆಯ ಮೇಲೆ ಸದಾ ಒಂದು ಕಣ್ಣು ಇದ್ದೇ ಇತ್ತು. ಶಾಲೆಯನ್ನು ಕಂಡರೆ ಅವರಿಗೆ ಒಂದು ವಿಧವಾದ ಗುಮಾನಿ. ಶಾಲೆಯ ಚಟುವಟಿಕೆಗಳನ್ನು, ಶಾಲೆಗೆ ರಾಷ್ಟ್ರ ನಾಯಕರ ಆಗಮನ ನಿರ್ಗಮನಗಳನ್ನು ಎಚ್ಚರಿಕೆಯಿಂದ ಗಮನಿಸಲಾಗುತ್ತಿತ್ತು.

## ರಾಷ್ಟ್ರೀಯ ಚಳುವಳಿಗಳ ಕೇಂದ್ರ ನ್ಯಾಷನಲ್ ಕಾಲೇಜು

ಗಾಂಧೀಜಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಸತ್ಯಾಗ್ರಹಗಳನ್ನು ನಡೆಸಿದರು. ಸಹಜವಾಗಿಯೇ ಅದರ ಪರಿಣಾಮ ವಿದ್ಯಾರ್ಥಿಗಳ ಮೇಲೆ, ವಿಶೇಷವಾಗಿ ನ್ಯಾಷನಲ್ ಹೈಸ್ಕೂಲಿನ ಮೇಲೆ ಇದ್ದೇ ಇತ್ತು. ಬೆಂಗಳೂರಿನ ವಿದ್ಯಾರ್ಥಿಗಳಲ್ಲಿನ ಅಶಾಂತಿಗೆ ನ್ಯಾಷನಲ್ ಹೈಸ್ಕೂಲೇ ಕೇಂದ್ರ ಎಂಬ ಪ್ರತೀತಿಯೂ ಇತ್ತು! ೧೯೩೦ ನೆಯ ಇಸವಿಯಲ್ಲಿ ಗಾಂಧಿಯವರು ಉಪ್ಪಿನ ಸತ್ಯಾಗ್ರಹ ನಡೆಸಿದಾಗ, ಶಾಲೆಯ ಉಪಾಧ್ಯಾಯರಾಗಿದ್ದ ಶ್ರೀ ಕೆ.ವೆಂಕಟರಾಮಯ್ಯ ಮತ್ತು ಶ್ರೀ ಎಚ್.ಅನಂತರಾವ್ ಅವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿ ಸತ್ಯಾಗ್ರಹದಲ್ಲಿ ಭಾಗವಹಿಸಲು ಹೋದರು. ೧೯೪೨ನೆಯ ಇಸವಿಯಲ್ಲಿ ಗಾಂಧೀಜಿ ಕ್ವಿಟ್ ಇಂಡಿಯಾ ಚಳುವಳಿಯನ್ನು ನಡೆಸಿದಾಗ ದೇಶಾದ್ಯಂತ ವಿದ್ಯಾರ್ಥಿ ಅಶಾಂತಿ, ಚಳುವಳಿಯಿತ್ತು. ಹಲವು ಶಾಲೆಗಳ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಚಳುವಳಿಯಲ್ಲಿ ಧುಮುಕಿದರು. ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಗಳು ಸುಮಾರು ೨ ತಿಂಗಳ ಕಾಲ ತರಗತಿಗಳಿಗೆ ಹೋಗಲೇ ಇಲ್ಲ. ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಶ್ರೀ ಕೆ.ಶ್ರೀನಿವಾಸರಾವ್ ಅವರು ತಮ್ಮ ಜವಾಬ್ದಾರಿಯನ್ನು ಸಹ–ಅಧ್ಯಾಪಕರಿಗೆ ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದರು.

೧೯೨೯ ರ ಮೆಟ್ರಿಕ್ ಪರೀಕ್ಷೆಯ ನಂತರ ನ್ಯಾಷನಲ್ ಕಾಲೇಜಿಗೆ ಸೇರಿದ ಶ್ರೀ ಆರ್.ಶ್ರೀನಿವಾಸರಾವ್ ಅವರು, ಅಲ್ಲಿನ ರಾಷ್ಟ್ರೀಯ ವಾತಾವರಣದಿಂದ ಪ್ರಭಾವಿತರಾಗಿ ಹಿಂದೂಸ್ತಾನಿ ಸೇವಾದಳ ಸೇರಿ, ಮುಂದೆ ಅದರ ಪೂರ್ಣಾವಧಿ ಸದಸ್ಯರಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದರು . ೧೯೩೨ರ ಕಾಯಿದೆ ಭಂಗ ಚಳವಳಿ, ೧೯೪೧ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಕಾರಾಗೃಹವನ್ನು ಅನುಭವಿಸಿದರು. ಅವರು ತಮ್ಮ ಶಾಲೆಯ ಕುರಿತಾಗಿ, "ಅನನುಭವಿಕನಾದ ನನ್ನಂತಹವರನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ಒಬ್ಬ ವ್ಯಕ್ತಿಯನ್ನಾಗಿ ಪರಿವರ್ತಿಸಿ ದೇಶದ ಸ್ವಾತಂತ್ರ್ಯ ಸಮರದಲ್ಲಿ ಅಳಿಲು ಸೇವೆ ಸಲ್ಲಿಸಲು ಧೈರ್ಯ, ಸ್ಫೂರ್ತಿಯನ್ನು ಕರುಣಿಸಿದ್ದಕ್ಕಾಗಿ ನಾನು ನಮ್ಮ ಶಾಲೆಗೆ ಚಿರಋಣಿ" ಎಂದು ಹೇಳಿ ನ್ಯಾಷನಲ್ ಕಾಲೇಜನ್ನು ನೆನಪಿಸಿಕೊಂಡಿದ್ದಾರೆ.

ಶ್ರೀ ಕೆ.ವಿ.ವಸಂತ್‌ರವರು ತಮ್ಮ ಶಾಲೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾ, ಅಂದಿನ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಕೆ.ಸಂಪದ್ಗಿರಿರಾಯರು ಹೇಳಿದ ಮಾತುಗಳನ್ನು ಉಲ್ಲೇಖಿಸಿದ್ದಾರೆ: "ನಮ್ಮ ದೇಶ ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆಯಲ್ಲಿ

ಸಿಲುಕಿದ್ದು, ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ, ತಿಲಕ್ ಮುಂತಾದ ಮುಖಂಡರು ಹೋರಾಡುತ್ತಿದ್ದಾರೆ. ನಿಮಗೂ ಸ್ಫೂರ್ತಿಯಿದೆ. ದೇಶಪ್ರೇಮದಿಂದ ಮುನ್ನುಗ್ಗಿದಾಗ, ನಿಮಗೆ ಧೈರ್ಯ ಕೊಟ್ಟು, ಬೆನ್ನು ತಟ್ಟಿ ಮುಂದೆ ಕಳುಹಿಸಬೇಕು. ಅಥವಾ ನೀವೇ ನಿಮ್ಮ ಸ್ವಂತ ಶಕ್ತಿಯಿಂದ ಮುನ್ನುಗ್ಗಬೇಕು. ಆಗ ನಿಮ್ಮ ಹೆಸರುಗಳು ಚರಿತ್ರಾರ್ಹವಾಗಿ ಶಾಶ್ವತವಾಗಿ ಉಳಿಯುತ್ತವೆ. ಇಂತಹ ಸ್ವಾತಂತ್ರ್ಯ ವೀರರಾಗಲು ಸೂಕ್ತ ಮಾನಸಿಕ ಸನ್ನಿವೇಶಗಳನ್ನು ಕಲ್ಪಿಸಿಕೊಡುವುದೇ ನಮ್ಮ ದೇಶೀಯ ವಿದ್ಯಾಶಾಲೆಯ ಗುರಿ. ಇಂತಹ ಸ್ಫೂರ್ತಿಯಿಂದ ಸ್ವಾತಂತ್ರ್ಯಯೋಧರಾಗಿ ನಮ್ಮ ಸಹೋದ್ಯೋಗಿಗಳಾಗಿದ್ದ ಸರ್ದಾರ್ ಕೆ.ವೆಂಕಟರಾಮಯ್ಯನವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಂಕೋಲಾದಲ್ಲಿ ನಡೆಯುತ್ತಿರುವ ಉಪ್ಪಿನ ಸತ್ಯಾಗ್ರಹಕ್ಕೆ ಹೋಗಿದ್ದಾರೆ. ನಾನು ಶಾಲೆಯಲ್ಲಿದ್ದುದು ೧೯೩೩ ರಿಂದ ೧೯೩೬. ದೇಶಕ್ಕಾಗಿ ಪ್ರಾಣವನ್ನೇ ಮುಡುಪಾಗಿಸಿದ ಭಗತ್ ಸಿಂಗ್ ಅಂತಹವರು, ಶಾಂತಿ ಹಾಗೂ ಸತ್ಯದ ತಳಹದಿ ಮೇಲೆ ಸೈನ್ಯವನ್ನು ಕಟ್ಟಿದ ಮಹಾತ್ಮಗಾಂಧಿ, ಇಂತಹವರ ಮೇಲ್ಪಂಕ್ತಿ ನನ್ನನ್ನು ಕಾಲೇಜಿನಲ್ಲಿದ್ದಾಗ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಗೆ ವಿದ್ಯಾರ್ಥಿ ಮುಖಂಡನನ್ನಾಗಿ ಮಾಡಿತು. ಕ್ರಾಂತಿಕಾರಿ ಚಟುವಟಿಕೆಗೆ ವಿದ್ಯಾರ್ಥಿ ಮುಖಂಡನಾಗಿ ಚಳುವಳಿಯಲ್ಲಿ ಅಗ್ರಗಣ್ಯನೆಂದು ಪೊಲೀಸರು ಭಾವಿಸಿದ್ದರು. ನಾನು ೯-೮-೪೨ರಂದು ಭೂಗತನಾಗಿ ಅಡಗಿಕೊಂಡಿದ್ದು ಅನೇಕ ರೀತಿಯ ಆಂದೋಳನದಲ್ಲಿ ಕೆಲಸ ಮಾಡಲು ನನಗೆ ತಳಹದಿ ಹಾಕಿತ್ತು ನ್ಯಾಷನಲ್ ಹೈಸ್ಕೂಲ್. ಅಂದಿನ ಚರಿತ್ರೆಯಲ್ಲಿ ನನಗೆ ಬರಹಗಾರರು ಕೊರುವ ಹೊಗಳಿಕೆ, ಖಿಲ್ಲತ್ತುಗಳು ಸಹ ನನ್ನ ಶಾಲೆಗೆ, ಆಗಿನ ಅಧ್ಯಾಪಕರಿಗಷ್ಟೇ ಸಲ್ಲಬೇಕಾಗಿದೆ". ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಗಳಿಗೂ ಹಾಗೂ ಇತರ ಸಮಾಜದಲ್ಲಿಯ ನಾಗರೀಕರಿಗೂ, ಗಾಂಧೀಜಿಯವರು ಬೆಂಗಳೂರಿಗೆ ಬಂದು ಹೋದ ಘಟನೆ ಪ್ರೇರಣಾದಾಯಕವಾಗಿ, ಹಲವರ ಜೀವನದಲ್ಲಿ ಮಾರ್ಪಾಟು ಹೊಂದಿ, ಸ್ವಾತಂತ್ರ್ಯಕ್ಕೋಸ್ಕರ ತಮ್ಮ ಜೀವನವನ್ನು ಮುಡಿಪಾಗಿಡುವಂತಾಯಿತು.

ಗಾಂಧೀಜಿಯವರು ಕನಸು ಕಂಡಿದ್ದ ಸ್ವಾತಂತ್ರ್ಯ, ಕೇವಲ ಬ್ರಿಟಿಷರಿಂದ ಅಧಿಕಾರವನ್ನು ಕಸಿಯುವುದಕ್ಕಷ್ಟೇ ಸೀಮಿತವಾಗಿರಲಿಲ್ಲ. ಅವರು ಮಾಡಿದ ಪ್ರತಿಯೊಂದು ಕಾರ್ಯವೂ, ಅವರಿಟ್ಟ ಪ್ರತಿಯೊಂದು ಹೆಜ್ಜೆಯೂ ಧರ್ಮನಿಷ್ಠವಾಗಿತ್ತು. ಗಾಂಧೀಜಿ ತಮ್ಮನ್ನು ಸನಾತನಿ ಹಿಂದೂ, ನಿಷ್ಠಾವಂತ



ಹಿಂದೂ ಎಂದು ಕರೆದುಕೊಳ್ಳುತ್ತಿದ್ದರು. ತಾವು ಹಿಂದುವಾಗಿರುವುದಕ್ಕೆ ತಮಗೆ ಅತ್ಯಂತ ಹೆಮ್ಮೆ ಎಂಬುದನ್ನು ವ್ಯಕ್ತಪಡಿಸುತ್ತಿದ್ದುದೂ ಉಂಟು. ಹಿಂದೂ ಧರ್ಮದ ಹಿರಿಮೆಯನ್ನು ಅವರು ಹಲವು ಬಾರಿ ವಿವರಿಸಿದರು. ಮೂಲದಲ್ಲಿ ಈ ಧರ್ಮವು ಎಲ್ಲರೂ ಒಪ್ಪುವಂತಹುದೇ. ಯಾರಿಗೂ ಅಹಿತವಾದುದು ಏನೂ ಇದರಲ್ಲಿ ಇರದು. ಎರಡನೆಯದಾಗಿ, ಹಿಂದೂಧರ್ಮ ಪ್ರಗತಿಶೀಲವಾದುದು. ಹೊಸ ಹೊಸ ಬೆಳವಣಿಗೆಗಳು ಇದರಲ್ಲಿ ಕಾಣಬರುತ್ತವೆ; ಕಾಲಕಾಲಕ್ಕೆ ಮಾರ್ಪಾಟಿಗೆ ಒಳಪಟ್ಟರೂ ಮೂಲ ತತ್ತ್ವಕ್ಕೆ ಧಕ್ಕೆ ಇಲ್ಲ. ಇದರಿಂದಲೇ ಇದನ್ನು ಸನಾತನ ಧರ್ಮ ಎನ್ನುವುದು. ಮೂರನೆಯದಾಗಿ, ಯೋಗ್ಯವಾದ ವಿಚಾರ ಎಲ್ಲಿಂದಲೇ ಬರಲಿ, ಅದನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಗಾಂಧೀಜಿ ಹೀಗೆ ಹಿಂದೂ ಧರ್ಮವನ್ನು ಮೆಚ್ಚಿಕೊಂಡರೂ, ತಮ್ಮ ಧರ್ಮವೇ ಎಲ್ಲಕ್ಕಿಂತಲೂ ಶ್ರೇಷ್ಠ ಎಂದು ಹಟ ಮಾಡಲಿಲ್ಲ. ತಾವು ಹಿಂದುವಾಗಿ ಹುಟ್ಟಿದರು. ಆದುದರಿಂದ ಹಿಂದುವಾಗಿಯೇ ಉಳಿದರು. ಅದು ಸ್ವಧರ್ಮ, ತಮಗೆ ಸಹಜಧರ್ಮ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ತಾಯಿ ಆದರಣೀಯಳಾಗಿರುವಂತೆಯೇ ತನ್ನ ಧರ್ಮವು ಆದರಣೀಯವೇ. ಈ ದೃಷ್ಟಿಯಿಂದಲೇ ಅವರು ಗೀತೆಯ ಶರಣರು, ರಾಮನ ಭಕ್ತರು. ತಮ್ಮ ಪ್ರಾರ್ಥನೆ ಪ್ರವಚನಗಳಲ್ಲಿ ಬಳಸಿದ ಪ್ರತಿಮೆಗಳೆಲ್ಲ ಹಿಂದೂಧರ್ಮದ್ದೇ.

## ಗಾಂಧೀಜಿ ಪ್ರಭಾವಕ್ಕೊಳಗಾದ ಎಚ್.ನರಸಿಂಹಯ್ಯನವರು

ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದವರಲ್ಲಿ ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿಯಾಗಿ, ಅಧ್ಯಾಪಕನಾಗಿ, ಮುಂದೆ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳೂ ಆಗಿದ್ದ ಎಚ್.ನರಸಿಂಹಯ್ಯನವರು ಪ್ರಮುಖರು. ನ್ಯಾಷನಲ್ ಕಾಲೇಜಿನ ಜೊತೆ ಅವರದು ಅವಿನಾಭಾವ ಸಂಬಂಧ. ಅವರ ಸ್ವಾತಂತ್ರ್ಯ ಹೋರಾಟದ ಸವಿ ನೆನಪುಗಳನ್ನೂ ಈ ಕಿರುಹೊತ್ತಿಗೆಯಲ್ಲಿ ಬಳಸಿಕೊಂಡಿದ್ದೇನೆ.

ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಖಾದಿ, ಹಿಂದಿ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ ಮುಖ್ಯವಾದುದು. ಶಾಲೆಗಳಲ್ಲಿ ಹಿಂದೆ ಹರಿಜನ ವಿದ್ಯಾರ್ಥಿಗಳನ್ನು ಸಾಕಷ್ಟು ದೂರ ಕೂಡಿಸುತ್ತಿದ್ದರು. ಅವರನ್ನು ಪ್ರತ್ಯೇಕಿಸಬಾರದು ಎಂಬ ಸರ್ಕಾರಿ ಆಜ್ಞೆ ಬಂದಾಗ ರಾಜ್ಯದ ಹಲವು ಕಡೆ

ಸವರ್ಣೀಯರಿಂದ ಪ್ರತಿಭಟನೆ, ಅಸಮಾಧಾನ, ಕೋಪಗಳು ವ್ಯಕ್ತವಾದವು; ಇದು ಅಶಾಂತಿಗೂ ಕಾರಣವಾಯಿತು. ನ್ಯಾಷನಲ್ ಕಾಲೇಜಿನಲ್ಲಿಯೂ ಈ ಬದಲಾವಣೆ ಸಹಜವಾಗಿ ಆಯಿತು. ರಾಷ್ಟ್ರೀಯ ವಿಚಾರದಿಂದ ಪ್ರಭಾವಿತವಾಗಿದ್ದ ಈ ಶಾಲೆಯಲ್ಲಿ ಹರಿಜನ ವಿದ್ಯಾರ್ಥಿಗಳು ಅಷ್ಟೊಂದು ಅಸ್ಪೃಶ್ಯರಾಗಿರಲಿಲ್ಲ. ಅಲ್ಲಿಂದ ಎಚ್.ನರಸಿಂಹಯ್ಯನವರ ವಿಚಾರಧಾರೆ ಪ್ರಾರಂಭವಾಯಿತು.

ಮಹಾತ್ಮ ಗಾಂಧಿಯವರೊಂದಿಗಿನ ಅವರ ಪ್ರಥಮ ಭೇಟಿ ಅಪೂರ್ವ ಘಟನೆ. ಅವರ ಮಾತಿನಲ್ಲಿಯೇ ನೋಡೋಣ:

"ನಿನ್ನ ಹೆಸರೇನು?"

"ನರಸಿಂಹಯ್ಯ"

"ಯಾವ ತರಗತಿಯಲ್ಲಿ ಓದುತ್ತಿದ್ದೀಯ?"

"ಫಿಫ್ತ್ ಫಾರಂ"

"ನಿನಗೆ ಹಿಂದಿ ಚೆನ್ನಾಗಿ ಬರುತ್ತದೆಯೇ?"

"ಸ್ವಲ್ಪ ಸ್ವಲ್ಪ ಬರುತ್ತದೆ (ತೋಡಾ ತೋಡಾ ಆತಾ ಹೈ)"

ಅವರೊಡನೆ ಆದ ಪುಟ್ಟ ಸಂಭಾಷಣೆ ೧೯೩೬ ನೆಯ ಇಸವಿ ಜೂನ್ ೧೧ ನೇ ತಾರೀಕು ಗುರುವಾರ ಸಂಜೆ ಸುಮಾರು ೫ ಗಂಟೆಗೆ ಆದದ್ದು. ಆಗ ಅವರು ಫಿಫ್ತ್ ಫಾರಂ ನಲ್ಲಿ ಓದುತ್ತಿದ್ದರು. ಅಂದರೆ, ಒಂಭತ್ತನೇ ತರಗತಿ. ಗಾಂಧೀಜಿಯವರು ಆಗ ಬೆಂಗಳೂರಿಗೆ ಬಂದಿದ್ದರು. ಅವರನ್ನು ನೋಡಲು ಅವರು ಬಿಡಾರ ಮಾಡಿದ್ದ ಕುಮಾರಕೃಪಾ ಅತಿಥಿ ಗೃಹಕ್ಕೆ ಅನೇಕ ವಿದ್ಯಾರ್ಥಿಗಳು ಹೋದರು. ಆ ಭವನದ ಮುಂದಿನ ಬಯಲಿನಲ್ಲಿ ಮರದ ಕೆಳಗೆ ಹುಲ್ಲಿನ ಮೇಲೆ ಗಾಂಧೀಜಿಯವರ ಆಗಮನಕ್ಕಾಗಿ ಕಾತುರದಿಂದ ಕಾಯುತ್ತಾ ಕುಳಿತಿದ್ದರು. ಸುಮಾರು ೫ ಗಂಟೆಯ ಹೊತ್ತಿಗೆ ಅವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಮೈಸೂರು ರಾಜ್ಯದ ಕಾಂಗ್ರೆಸ್ ನಾಯಕರಾದ ಕಾರ್ನಾಡು ಸದಾಶಿವರಾಯರೊಂದಿಗೆ ಗಾಂಧೀಜಿಯವರು ಬಂದರು. ಶಿಸ್ತಿನಿಂದ ಗಾಂಧಿ ಟೋಪಿಗಳನ್ನು ಧರಿಸಿದ್ದ





(11 – 6 – 1936)
The boy in the picture, then in the IX Standard of the School, is now the President of the Society

ವಿದ್ಯಾರ್ಥಿಗಳೆಲ್ಲರೂ ಎದ್ದು ನಿಂತು ಗೌರವ ಸೂಚಿಸಿದರು. ಗಾಂಧೀಜಿಯವರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಸಂಪದ್ಗಿರಿರಾಯರಿಗೆ ಏನೋ ಹೇಳಿದರು. ಮುಖ್ಯೋಪಾಧ್ಯಾಯರು ಎಚ್.ನರಸಿಂಹಯ್ಯನವರನ್ನು ಕರೆದರು. ಅವರು ಹೋಗಿ ಗಾಂಧೀಜಿಯವರ ಪಕ್ಕದಲ್ಲಿ ನಿಂತರು. ಪ್ರೀತಿಯಿಂದ ಅವರ ಭುಜದ ಮೇಲೆ ಕೈ ಹಾಕಿ, ಅವರನ್ನು ಮೇಲೆ ತಿಳಿಸಿದ ಪ್ರಶ್ನೆಗಳನ್ನು ಹಿಂದಿಯಲ್ಲಿ ಕೇಳಿದರು. ನರಸಿಂಹಯ್ಯನವರು "ಹಿಂದಿ ತೋಡಾ ತೋಡಾ ಆತಾ ಹೈ" ಎಂದಾಗ ನಕ್ಕು ಅವರನ್ನು ವಾಪಸ್ ಕಳುಹಿಸಿದರು. ಅವರನ್ನು ಏತಕ್ಕಾಗಿ ಕರೆಸಿ ಮಾತನಾಡಿಸಿದರೆಂಬುದು ಮುಂದೆ ಅವರಿಗೆ ತಿಳಿಯಿತು. ಗಾಂಧೀಜಿಯವರು ಎಲ್ಲಿ ಹೋದರೂ ರಾಷ್ಟ್ರಭಾಷೆಯಾದ ಹಿಂದಿಯನ್ನು ಉಪಯೋಗಿಸಬೇಕೆಂದು ತಿಳಿಸುತ್ತಿದ್ದರು, ವಿದ್ಯಾರ್ಥಿಗಳೆಲ್ಲ ಹಿಂದಿಯನ್ನು ಕಲಿಯಬೇಕು ಎಂದು ಪ್ರತಿಪಾದಿಸುತ್ತಿದ್ದರು. ಅವರು ನ್ಯಾಷನಲ್ ಹೈಸ್ಕೂಲಿನ ಹೆಸರು, ಉಪಾಧ್ಯಾಯರ ಖಾದಿ ಉಡುಪು ಮತ್ತು ಗಾಂಧಿ ಟೋಪಿಧಾರಿಗಳಾದ ವಿದ್ಯಾರ್ಥಿಗಳನ್ನೆಲ್ಲ ನೋಡಿ ಅವರಿಗೆ ಹಿಂದಿ ಬರಬಹುದೆಂದು ಊಹಿಸಿ,

ನಮ್ಮ ಹಿಂದಿ ಭಾಷೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಬಲ್ಲ ಒಬ್ಬ ವಿದ್ಯಾರ್ಥಿ ಬೇಕೆಂದು ಮುಖ್ಯೋಪಾಧ್ಯಾಯರಿಗೆ ತಿಳಿಸಿದರಂತೆ. ಅದಕ್ಕಾಗಿ ಮುಖ್ಯೋಪಾಧ್ಯಾಯರು ನರಸಿಂಹಯ್ಯನವರನ್ನು ಕರೆದರು. ಗಾಂಧೀಜಿಯವರೊಂದಿಗೆ ಅವರ ಆ ದಿನದ ಎರಡು ನಿಮಿಷದ ಆಕಸ್ಮಿಕ, ಅತ್ಯಾಶ್ಚರ್ಯಕರವಾದ, ಅಪೂರ್ವವಾದ ಭೇಟಿ ಅವರ ಮನಸ್ಸಿನಲ್ಲಿ ಚಿರಸ್ಥಾಯಿಯಾಯಿತು. ಅವರ ಜೀವನದ ಆ ಮಹತ್ತರ ಘಟನೆಯನ್ನು ಅವರು ಸದಾ ನೆನಪಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದಲೇ ಏನೋ, 'ದಿ ಹಿಂದೂ' ಪತ್ರಿಕೆ ಅದರ ಛಾಯಾಚಿತ್ರ ತೆಗೆದುಕೊಂಡು ಮಾರನೆಯ ದಿನದ ಸಂಚಿಕೆಯಲ್ಲಿ ಪ್ರಕಟಿಸಿತು.

೧೯೩೮ ರ ಸಮಯದಲ್ಲಿ ಎಲ್ಲೆಲ್ಲಿಯೂ ಉಜ್ವಲ ರಾಷ್ಟ್ರಾಭಿಮಾನ; ಪ್ರತಿನಿತ್ಯ ಮಹಾತ್ಮ ಗಾಂಧಿ, ನೆಹರೂ, ಪಟೇಲ್, ಸುಭಾಷ್ ಚಂದ್ರ ಬೋಸ್ ಅವರ ಭಾಷಣಗಳನ್ನು ಓದಿ ಯುವಕರೆಲ್ಲರೂ ಸ್ಫೂರ್ತಿಗೊಂಡಿದ್ದರು. ದೇಶದಲ್ಲಿ ಒಂದಲ್ಲ ಒಂದು ಕಡೆ ಅಸಹಕಾರ ಚಳವಳಿಗಳು, ಪ್ರತಿಬಂಧಕಾಜ್ಞೆಗಳು; ಇವುಗಳನ್ನು ಉಲ್ಲಂಘಿಸಿ ನೂರಾರು ಜನರು ಜೈಲಿಗೆ ಹೋಗಿ ಬರುತ್ತಿದ್ದರು. ಸ್ವಾತಂತ್ರ್ಯ ಪಡೆಯಲು ಇವೆಲ್ಲ ಪೀಠಿಕಾ ರೂಪದಂತಿದ್ದ ತರಬೇತಿಯನ್ನು ಜನರಿಗೆ ವಿದ್ಯಾರ್ಥಿಗಳು ಕೊಡುತ್ತಿದ್ದರು. ಬ್ರಿಟಿಷ್ ಸರ್ಕಾರ ದೇಶದ್ರೋಹಿ ಎಂದು ಪರಿಗಣಿಸಿ ನಾಯಕರನ್ನು ಶಿಕ್ಷಿಸುತ್ತಿತ್ತು. ಸುಭಾಷ್ ಚಂದ್ರಬೋಸರ ಅಣ್ಣ ಶರತ್ ಚಂದ್ರ ಬೋಸರು ಕಾಲೇಜಿನ ಸಭಾಂಗಣದಲ್ಲಿ ವೀರಾವೇಶದ ಭಾಷಣ ಮಾಡಿದರು. ಎಲ್ಲೆಲ್ಲೂ ಸ್ವದೇಶಿ ಮನೋಭವ, ದೇಶಾಭಿಮಾನ ಉಕ್ಕಿ ಹರಿಯಲಾರಂಭಿಸಿತು. ಯುವಕರಂತೂ ಎಲ್ಲದರಲ್ಲಿಯೂ ಮುಂಚೂಣಿಯಲ್ಲಿದ್ದರು. ಎಲ್ಲ ರೀತಿಯ ಸ್ವಾತಂತ್ರ್ಯ ಹೋರಾಟಗಾರರ ವೇದಿಕೆಯಾಗಿದ್ದ ಪಕ್ಷವೆಂದರೆ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್. ಅದರ ಏಕೈಕ ಉದ್ದೇಶ ಬ್ರಿಟಿಷ್ ಆಡಳಿತದಿಂದ ದೇಶವನ್ನು ಬಿಡಿಸಿ, ಸ್ವಾತಂತ್ರ್ಯ ಗಳಿಸುವುದು. ಆದುದರಿಂದ, ಆ ಉದ್ದೇಶ ಇದ್ದವರೆಲ್ಲ ಒಂದು ವಿಧದಲ್ಲಿ ಕಾಂಗ್ರೆಸ್ ಮನೋಭಾವದವರೇ. ಈಗಿರುವ ಕೆಲವು ಕಮ್ಯುನಿಸ್ಟ್ ನಾಯಕರು ಮೊದಲು ಕಾಂಗ್ರೆಸ್‌ನಲ್ಲಿ ಇದ್ದವರೇ. ಒಂದು ದಿನ ಬೊಂಬಾಯಿಯ ಮೇಯರ್ ಆಗಿದ್ದ ಕೆ.ಎಫ್.ನಾರಿಮನ್ ಬೆಂಗಳೂರಿಗೆ ಬಂದರು. ಅವರು ಕಾಂಗ್ರೆಸ್ಸಿಗರು. ಕಬ್ಬನ್ ಪೇಟೆಗೆ ಸಮೀಪದಲ್ಲಿರುವ ಬನಪ್ಪ ಪಾರ್ಕಿನಲ್ಲಿ ಬಹಿರಂಗ ಸಭೆ. ೧೪೪ನೇ ಸೆಕ್ಷನ್ ಜಾರಿ ಮಾಡಲಾಗಿತ್ತು. ಅಂದರೆ, ಸಾರ್ವಜನಿಕ ಸ್ಥಳದಲ್ಲಿ ೫ ಮಂದಿಗಿಂತ ಹೆಚ್ಚು ಜನ ಸೇರುವಂತಿಲ್ಲ. ಬಹುತೇಕ ರಾಜಕೀಯ ಬಹಿರಂಗ ಸಭೆಗಳು ಅದೇ ಪಾರ್ಕಿನಲ್ಲಿ ನಡೆಯುತ್ತಿದ್ದವು. ಕೆಲವು ತುಳಸೀತೋಟದ ಪಾರ್ಕಿನಲ್ಲೂ ನಡೆಯುತ್ತಿದ್ದವು. ೧೪೪ನೇ ಸೆಕ್ಷನ್ ಜಾರಿ ಮಾಡುವುದು, ಅದನ್ನು ಕಾಂಗ್ರೆಸ್ಸಿನವರು ಉಲ್ಲಂಘಿಸುವುದು ಮಾಮೂಲಿ ಕೆಲಸ. ಇದು ಸೆಕ್ಷನ್ ಜಾರಿ ಮಾಡುವ ಸರಕಾರಕ್ಕೂ ಗೊತ್ತು, ಉಲ್ಲಂಘಿಸುವ ಜನರಿಗೂ ಗೊತ್ತು. ಕೆ.ಎಫ್. ನಾರಿಮನ್‌ರನ್ನು ಸಭೆಗೆ ಮುಂಚೆ ಬಂಧಿಸಲಾಗಲಿಲ್ಲ. ಅವರು ಹೇಗೋ ರಹಸ್ಯವಾಗಿ ಸಂಜೆ ೬ ಗಂಟೆಗೆ ಸರಿಯಾಗಿ ಬನಪ್ಪಪಾರ್ಕ್‌ನ ಬಹಿರಂಗ ಸಭೆಯ ವೇದಿಕೆ ಮೇಲೆ ಪ್ರತ್ಯಕ್ಷವಾದರು. ಅವರು ಭಾಷಣ ಪ್ರಾರಂಭಿಸುವಷ್ಟರಲ್ಲಿ ಅವರನ್ನು ಪೊಲೀಸರು ಬಂಧಿಸಿದರು. ಜನರು ಪ್ರತಿಭಟಿಸಿದರು. ಬಲವಾದ ಲಾಠಿ ಚಾರ್ಜ್ ಆಯಿತು. ಯಾರೂ ಜಗ್ಗಲಿಲ್ಲ. ಪೊಲೀಸಿನವರನ್ನು ಜನರು ಅಟ್ಟಿಸಿಕೊಂಡು ಹೋದರು. ಪೋಲೀಸಿನವರು ಸತ್ತೆನೊ ಬಿದ್ದೆನೊ ಎಂದು ಪಕ್ಕದ ಕಾಂಪೌಂಡ್‌ನಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಏರಿದರು. ಅವರ ಮೇಲೆ ಕಲ್ಲುಗಳ ಮತ್ತು ಚಪ್ಪಲಿಗಳ ಸುರಿಮಳೆ. ಮಾರನೆಯ ದಿನ ಬೆಂಗಳೂರಿನಾದ್ಯಂತ ವಿದ್ಯಾರ್ಥಿ ಮುಷ್ಕರ.



## ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿ

೧೯೪೦ ರಲ್ಲಿ ವೈಯುಕ್ತಿಕ ಸತ್ಯಾಗ್ರಹ (Individual Civil Disobedience) ವನ್ನು ಗಾಂಧೀಜಿಯವರು ಪ್ರಾರಂಭಿಸಿದರು. ೧೯೩೭ರಲ್ಲಿ ಪ್ರಪಂಚದ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಬ್ರಿಟನ್ ಮತ್ತು ಜರ್ಮನಿಗಳ ನಡುವೆ ನಡೆದ ಈ ಜಾಗತಿಕ ಸಮರದಲ್ಲಿ ಬ್ರಿಟಿಷರು ನಮ್ಮನ್ನು ಕೇಳದೆ ಭಾರತವನ್ನೂ ಯುದ್ಧಕ್ಕೆ ಎಳೆದರು. ಬ್ರಿಟಿಷರ ಈ ಯುದ್ಧಕ್ಕೆ ಬೆಂಬಲ ಕೊಡಲು ಕಾಂಗ್ರೆಸ್ ಸಿದ್ಧವಿರಲಿಲ್ಲ. ಆದರೆ ಜರ್ಮನಿಯ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಬ್ರಿಟಿಷರು ಯುದ್ಧ ಮಾಡುತ್ತಿದ್ದುದರಿಂದ ಬ್ರಿಟಿಷರಿಗೆ ಹೆಚ್ಚು ತೊಂದರೆ ಕೊಡಲೂ ಕಾಂಗ್ರೆಸ್ ಇಚ್ಛಿಸಲಿಲ್ಲ. ಆದುದರಿಂದ ವೈಯಕ್ತಿಕ ಸತ್ಯಾಗ್ರಹವನ್ನು ಗಾಂಧೀಜಿಯವರು ೧೯೪೦ ರಲ್ಲಿ ಮೊದಲು ಮಾಡಿದರು. ಬ್ರಿಟಿಷರ ಆ ಯುದ್ಧಕ್ಕೆ ಸಹಾಯ ಮಾಡಬಾರದೆಂದು ಗಾಂಧೀಜಿ ಘೋಷಿಸಿದರು. ವಿನೋಬಾ

ಭಾವೆಯವರು ಮೊದಲ ಸತ್ಯಾಗ್ರಹಿ. ವಾರ್ಧಾದ ಪೌನಾರ್ ಆಶ್ರಮದಿಂದ ೧೯೪೦ ಅಕ್ಟೋಬರ್ ೧೭ ರಂದು ಪ್ರಾರಂಭವಾದ ಸತ್ಯಾಗ್ರಹವು ೧೯೪೧ ನೆಯ ಇಸವಿಯ ಕೊನೆಯ ತನಕ ನಡೆಯಿತು. ಕೊನೆಗೆ ಗಾಂಧೀಜಿ ರೋಸಿಹೋಗಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ "Do or Die" "ಮಾಡು ಇಲ್ಲವೇ ಮಡಿ" ಎಂಬ ಅಂತಿಮ ಚಳುವಳಿಯನ್ನು ನಡೆಸಬೇಕೆಂದು ನಿರ್ಧರಿಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ೧೯೪೨ ಆಗಸ್ಟ್ ೭ ರಂದು ಬೊಂಬಾಯಿಯಲ್ಲಿ ಸಭೆ ಸೇರಿ **"ಬ್ರಿಟಿಷರೇ ಭಾರತ ಬಿಟ್ಟು ತೊಲಗಿ"** (Quit India – ಕ್ವಿಟ್ ಇಂಡಿಯಾ) ಚಳುವಳಿ ಮಾಡಲು ನಿರ್ಧರಿಸಿತು. ಆಗಸ್ಟ್ ೯ ನೆಯ ತಾರೀಖು ಬೆಳಗಿನ ಜಾವ ಸರ್ಕಾರ ಹಠಾತ್ತನೆ ಗಾಂಧೀಜಿ ಮತ್ತಿತರ ನಾಯಕರನ್ನು ದಸ್ತಗಿರಿ ಮಾಡಿತು, ಕಾಂಗ್ರೆಸ್ಸನ್ನು ಕಾನೂನುಬಾಹಿರ ಸಂಸ್ಥೆ ಎಂದು ಸರ್ಕಾರ ಘೋಷಿಸಿತು. ನಾಯಕರ ದಸ್ತಗಿರಿ ವಾರ್ತೆ ಸಿಡಿಲಿನಂತೆ ದೇಶಾದ್ಯಂತ ಹಬ್ಬಿತು. ಅಕ್ಷರಶಃ ದೇಶ ಅಲ್ಲೋಲಕಲ್ಲೋಲವಾಯಿತು. ಕ್ವಿಟ್ ಇಂಡಿಯಾ ಚಳುವಳಿಯ ಪ್ರಾರಂಭಕ್ಕೆ ಮೊದಲೇ ಅನಿರೀಕ್ಷಿತವಾಗಿ ಗಾಂಧೀಜಿ ಮತ್ತು ಇತರ ನಾಯಕರ ದಸ್ತಗಿರಿಯಾದರೆ, ಪ್ರತಿಯೊಬ್ಬ ಭಾರತೀಯನೂ ತನಗೆ ತಾನೇ ನಾಯಕನಾಗಿ ಚಳುವಳಿಯನ್ನು ನಡೆಸಿ ಮುಂದುವರೆಸಿಕೊಂಡು ಹೋಗಬೇಕೆಂದು ಕಾಂಗ್ರೆಸ್ ನಿರ್ಧರಿಸಿತ್ತು.

**ಬೆಂಗಳೂರಿನಲ್ಲಿ ಆಂದೋಲನ:** ದೇಶದಾದ್ಯಂತ ನಡೆದದ್ದೇ ಮೈಸೂರು ರಾಜ್ಯದಲ್ಲೂ ನಡೆಯಿತು. ಬೆಂಗಳೂರಿನಲ್ಲಿ ಇಂಟರ್ ಮೀಡಿಯೇಟ್ ಕಾಲೇಜು ಮತ್ತು ಸೆಂಟ್ರಲ್ ಕಾಲೇಜು ಚಳುವಳಿಯ ಕೇಂದ್ರ ಬಿಂದುಗಳಾಗಿದ್ದವು. ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳೂ ದೊಡ್ಡ ಸಂಖ್ಯೆಯಲ್ಲಿ ಚಳುವಳಿಗೆ ಸೇರಿಕೊಂಡರು. ವಿದ್ಯಾರ್ಥಿ ಪ್ರದರ್ಶನಗಳನ್ನು ಹತ್ತಿಕ್ಕಲು ಮಾಮೂಲಿನಂತೆ ಲಾಠಿ ಚಾರ್ಜು, ಅಶ್ರುವಾಯು, ಗೋಲಿಬಾರ್‌ಗಳು ಯಥೇಚ್ಛವಾಗಿ ನಡೆದುವು. ಎಲ್ಲೆಲ್ಲಿಯೂ ಪ್ರತಿಬಂಧಕಾಜ್ಞೆಗಳು, ಪ್ರಚಂಡ ಮೆರವಣಿಗೆಗಳು, ಕಾನೂನು ಉಲ್ಲಂಘನೆ, ದಸ್ತಗಿರಿ. ವಿದ್ಯಾರ್ಥಿ ಮೆರವಣಿಗೆಗಳ ಮುಂಭಾಗ ನಗರದ ಸಿಟಿ ಮಾರ್ಕೆಟ್ ದಾಟಿದ್ದರೆ, ಹಿಂಭಾಗವಿನ್ನೂ ಸೆಂಟ್ರಲ್ ಕಾಲೇಜು ಬಳಿಯೇ ಇರುತ್ತಿತ್ತು. ಅಂದರೆ ಮೆರವಣಿಗೆಯ ಉದ್ದ ಸುಮಾರು ಒಂದೂವರೆ ಕಿಲೋಮೀಟರ್! ಸತ್ಯಾಗ್ರಹದ ರೂಪುರೇಷೆಗಳನ್ನು ನಿಯೋಜಿಸಲು ಬೆಂಗಳೂರು ಮುನಿಸಿಪಲ್



ಗಡಿಯಾಚೆಯಿದ್ದ ಬನಶಂಕರಿ ಬಡಾವಣೆಯಲ್ಲಿ ವಿದ್ಯಾರ್ಥಿಗಳ ಸಭೆ ನಡೆದಿದ್ದು ಇನ್ನೂ ಜ್ಞಾಪಕದಲ್ಲಿವೆ ಎನ್ನುತ್ತಾರೆ ಎಚ್.ನರಸಿಂಹಯ್ಯನವರು (ಅವರ **'ಹೋರಾಟದ ಹಾದಿ'** ಆತ್ಮಕಥೆಯಲ್ಲಿ). ಆಗ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಮೂರನೆಯ ಬಿಎಸ್ಸಿ ಆನರ್ಸ್ ತರಗತಿಯಲ್ಲಿ ಓದುತ್ತಿದ್ದರು. ಮಿಡಲ್ ಸ್ಕೂಲಿನಲ್ಲಿ ಇದ್ದಾಗಲೇ ಅವರಿಗೆ ರಾಷ್ಟ್ರೀಯ ಮನೋಭಾವ ಮೊದಲಾಗಿತ್ತು. ಆ ರಾಷ್ಟ್ರೀಯ ಮನೋಭಾವ ಅವರಲ್ಲಿ ದಿನೇ ದಿನೇ ಬೆಳೆಯುತ್ತಿತ್ತು. ವಾರಪತ್ರಿಕೆಗಳಲ್ಲಿ, ದಿನಪತ್ರಿಕೆಗಳಲ್ಲಿ ಬರುತ್ತಿದ್ದ ಸುದ್ದಿಗಳನ್ನು ಓದಿ ದೇಶದ ಬಗ್ಗೆ, ಸ್ವಾತಂತ್ರ್ಯ ಗಳಿಸುವ ಬಗ್ಗೆ ಸಾಕಷ್ಟು ಸ್ಫೂರ್ತಿಯನ್ನು ಪಡೆದಿದ್ದರು. ಅವರು ೨೨ ವರ್ಷದ ಬಿಸಿರಕ್ತದ ಯುವಕ!

**ಚಳುವಳಿಗೆ ಧುಮುಕಿದ ಬಿಸಿರಕ್ತದ ಯುವಕ!**

ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳುವಳಿಯನ್ನು ಮೊದಲು ಮಾಡಿದರೆ ಅವರೇನು ಮಾಡಬೇಕೆಂದು ಹಲವಾರು ದಿನಗಳ ಮುಂಚೆಯೇ ದೀರ್ಘವಾಗಿ ಯೋಚಿಸಿದ್ದರು. ಚಳುವಳಿಗಳಲ್ಲಿ ಭಾಗವಹಿಸಿದರೆ ಮುಂದೆ ಏನಾಗುತ್ತದೆ ಎಂಬುದನ್ನು ಯಾರೂ ಏನೂ ಹೇಳಲು ಸಾಧ್ಯವಿರಲಿಲ್ಲ. ಅವರ ಶಿಕ್ಷಣ ಅಲ್ಲಿಗೆ ಮುಗಿದರೂ ಹೆಚ್ಚಲ್ಲ. ಬಡತನದ ಬೇಗೆಯಲ್ಲಿ ಬೆಂದು ಸ್ವಪ್ರಯತ್ನದಿಂದ ಅಗಾಧವಾದ ಕಷ್ಟಗಳನ್ನು ಅನುಭವಿಸಿ ಇನ್ನೇನು ೬–೭ ತಿಂಗಳಲ್ಲಿ ಪದವಿ ಗಳಿಸುವ ಅಂತಿಮ ಹಂತದಲ್ಲಿ ಚಳುವಳಿಯಲ್ಲಿ ಭಾಗವಹಿಸಿ ಅನಿಶ್ಚಿತ ಭವಿಷ್ಯಕ್ಕೆ ತುತ್ತಾಗುವುದು ಸೂಕ್ತವಲ್ಲ ಎಂದು ಒಂದು ಯೋಚನೆಯಾದರೆ, ಮತ್ತೊಂದೆಡೆ ತಮ್ಮ ಭವಿಷ್ಯ ಏನೇ ಆಗಲಿ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವುದು ಉಚಿತವೆಂದು ಮತ್ತೊಂದು ಆಲೋಚನೆ. ಹೀಗೆ ಅವರ ಮನಸ್ಸು ಡೋಲಾಯಮಾನವಾಗಿತ್ತು. ಕೆಲವು ರಾತ್ರಿ ನಿದ್ರೆ ಕೆಟ್ಟದ್ದೂ ಇದೆ. ದೀರ್ಘವಾದ ಚಿಂತನೆಯಾದ ಮೇಲೆ ಕೊನೆಗೆ, ಏನೇ ಆಗಲಿ ಚಳುವಳಿಯಲ್ಲಿ ಭಾಗವಹಿಸಬೇಕೆಂದು ಸಂಕಲ್ಪ ಮಾಡಿದರು.

ಆಗ ಅವರು ವಿಶ್ವೇಶ್ವರಪುರದಲ್ಲಿರುವ ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್ ಉಚಿತ ವಿದ್ಯಾರ್ಥಿನಿಲಯದಲ್ಲಿದ್ದರು. ಆಗಸ್ಟ್ ೧೭–೧೮ರ ಸಮೀಪ ಒಂದು ದಿನ ಸುಮಾರು ೮:೩೦ ಗಂಟೆಗೆ ವಿಶ್ವೇಶ್ವರಪುರದಲ್ಲಿರುವ ಸಜ್ಜನರಾವ್

ಚೌಕದಲ್ಲಿ ಅದೇ ದಿನ ಸಂಜೆ ಬಹಿರಂಗ ಸಭೆ ಏರ್ಪಾಡು ಮಾಡಲು ಆರ್ಯಸಮಾಜದಲ್ಲಿದ್ದ ಅವರ ಸ್ನೇಹಿತರೊಂದಿಗೆ ಮಾತನಾಡಿಕೊಂಡು ಪುನಃ ಸ್ಟೂಡೆಂಟ್ಸ್ ಹೋಮ್‌ಗೆ ಸೈಕಲ್ ಮೇಲೆ ವಾಪಸ್ ಬರುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಒಂದು ಪೊಲೀಸ್ ವಾಹನವು ಸಜ್ಜನರಾವ್ ಚೌಕದಲ್ಲಿ ಅವರನ್ನು ತಡೆಯಿತು. ಅವರು ಸೈಕಲಿನಿಂದ ಇಳಿದರು. ವ್ಯಾನಿನಿಂದ ಪೊಲೀಸ್ ಇನ್ಸ್‌ಪೆಕ್ಟರ್ ಇಳಿದು ಅವರನ್ನು ಉದ್ದೇಶಿಸಿ "ನೀನು ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೀಯೆ ಎಂದು ಗೊತ್ತಾಗಿದೆ. ಹಾಗೆ ಮಾಡಬೇಡ, ಹುಷಾರಾಗಿರು" ಎಂದು ಎಚ್ಚರಿಕೆ ಕೊಟ್ಟರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಲೇಬೇಕೆಂಬ ದಿಟ್ಟ ನಿಲುವು, ಅದಮ್ಯ ಉತ್ಸಾಹಗಳಿದ್ದ ನರಸಿಂಹಯ್ಯನವರು, "ನಿಮ್ಮ ಕೆಲಸ ನೀವು ಮಾಡಿ, ನನ್ನ ಕೆಲಸ ನಾನು ಮಾಡುತ್ತೇನೆ" ಎಂದು ಹೇಳಿದರು.

"ಓಹೋ! ನನಗೇ ನೀನು ನನ್ನ ಕೆಲಸ ಮಾಡು ಅಂತ ಹೇಳ್ತೀಯೇನೋ, ಹತ್ತು ವ್ಯಾನ್" ಅಂದರು. "ಆಗಬಹುದು" ಅಂತ ಹೇಳಿ ನರಸಿಂಹಯ್ಯನವರು ಸೈಕಲನ್ನು ಪಕ್ಕದಲ್ಲಿ ನಿಂತಿದ್ದ ಒಬ್ಬ ಸ್ನೇಹಿತನಿಗೆ ಕೊಟ್ಟು ಸ್ಟೂಡೆಂಟ್ಸ್ ಹೋಮ್‌ನಲ್ಲಿದ್ದ ಸೈಕಲ್ ಮಾಲೀಕನಿಗೆ ಕೊಡುವಂತೆ ಹೇಳಿ ವ್ಯಾನಿನಲ್ಲಿ ಕುಳಿತುಕೊಂಡರು. "ನೀನು ಯಾವ ಕ್ಲಾಸ್‌ನಲ್ಲಿ ಓದುತ್ತಿದ್ದೀಯಾ? ಎಲ್ಲಿದ್ದೀಯಾ?" ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಕೇಳಿದರು. "ಮೂರನೇ ಬಿಎಸ್ಸಿ (ಆನರ್ಸ್). ವಿಶ್ವೇಶ್ವರಪುರದಲ್ಲಿರುವ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್‌ನಲ್ಲಿ ಊಟ, ಉಚಿತ ವಸತಿ" ಎಂದರು. "ಬಿಟ್ಟಿ ಊಟ ಮಾಡಿಕೊಂಡು ಓದೋದು ಬಿಟ್ಟು ಇದೇನಾ ನೀನು ಮಾಡೋದು!? ನಿನಗೆಷ್ಟು ಕೊಬ್ಬು! ನನ್ನ ಕೆಲಸ ಮಾಡು ಅಂಥ ನೀನು ನನಗೇ ಆಜ್ಞೆ ಮಾಡುತ್ತಿಯಾ? ಹುಷಾರಾಗಿ ಮಾತನಾಡಬೇಕು. ಏನು ಅಂತ ತಿಳಿದೆ" ಎಂದು ಗುಡುಗಿದರು. "ನಾನು ಏನನ್ನು ಹೇಳಲಿ? ನಾನು ಹೇಳಿದ್ದರಲ್ಲಿ ತಪ್ಪಿಲ್ಲ ಅಂತ ತಿಳಿದುಕೊಂಡಿದ್ದೇನೆ" ಉತ್ತರಿಸಿದರು. ಒಂದೆರಡು ನಿಮಿಷವಾದ ಮೇಲೆ "ನೀನು ಬಡವನ ಹಾಗೆ ಕಾಣಿಸ್ತೀಯಾ. ಹೋಗಲಿ, ಇನ್ನು ಮೇಲೆ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಅಂತ ಹೇಳಿ ಕ್ಷಮಾಪಣಾ ಪತ್ರ ಬರೆದುಕೊಡು, ಇಲ್ಲಿಯೇ ಬಿಟ್ಟು ಬಿಡುತ್ತೇನೆ" ಎಂದು ಸಮಾಧಾನಚಿತ್ತರಾಗಿ ಇನ್ಸ್‌ಪೆಕ್ಟರ್ ಹೇಳಿದರು.



"ಅದೆಲ್ಲಾ ಆಗೋದಿಲ್ಲ" ಎಂದು ನರಸಿಂಹಯ್ಯ ಹೇಳಿದರು. "ಸರಿ ಬಿಡು" ಎಂದರು. ಈಗಿನ ಕಾರ್ಪೊರೇಶನ್ ಸಮೀಪದಲ್ಲಿರುವ ಹಲಸೂರು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಕ್ಷಮಾಪಣಾ ಪತ್ರ ಕೊಟ್ಟರೆ ಬಿಡುಗಡೆ ಮಾಡುತ್ತೇವೆಂದು ಅಲ್ಲಿಯ ಪೊಲೀಸ್ ಅಧಿಕಾರಿಗಳೂ ಹೇಳಿದರು. ಅದನ್ನೂ ನಿರಾಕರಿಸಿದರು ನರಸಿಂಹಯ್ಯನವರು. ಆಮೇಲೆ ಅವರ ಹೆಸರು, ವಿಳಾಸ, ತರಗತಿ ಮುಂತಾದ ವಿವರಗಳನ್ನು ದಾಖಲಿಸಿಕೊಂಡು ಅದೇ ವ್ಯಾನಿನಲ್ಲಿ ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು. ಅವರನ್ನು ದಸ್ತಗಿರಿ ಮಾಡಿದಾಗ ಆಗಲಿ ಅಥವಾ ಸೆಂಟ್ರಲ್ ಜೈಲಿಗೆ ಒಬರೇ ಹೋದಾಗ ಆಗಲಿ ಅವರಿಗೆ ಯಾವುದೇ ಭಯವೂ ಆಗಲಿಲ್ಲ. ದೃಢ ಮನಸ್ಸಿನಿಂದ ಎಲ್ಲದಕ್ಕೂ ಸಿದ್ಧರಾಗಿದ್ದರು. ಆಗ ಸುಮಾರು ರಾತ್ರಿ ೯:೩೦ ಗಂಟೆ ಇದ್ದಿರಬಹುದು. ರಾಜಕೀಯ ಕೈದಿಗಳಿದ್ದ ಕಡೆಗೆ ಅವರನ್ನು ಕರೆದುಕೊಂಡು ಹೋದರು. ಅಲ್ಲಿ ವಿದ್ಯಾರ್ಥಿಗಳೂ ಇದ್ದರು. ಅಲ್ಲಿ ಅವರ ತಾಲ್ಲೂಕಿನ (ಗೌರಿಬಿದನೂರು) ಹೆಸರಾಂತ ಕಾಂಗ್ರೆಸ್ಸಿಗರಾದ ಶ್ರೀ ಎನ್.ಸಿ.ನಾಗಯ್ಯರೆಡ್ಡಿಯವರು "ಏಮಯ್ಯ ಒಗಡೆ ವಸ್ತಿವಿ? ಉಪ್ಪಿಂಡಿ ತಿಂದಾಮು, ರಾ" (ಏನಯ್ಯ ಒಬ್ಬನೆ ಬಂದೆ? ಉಪ್ಪಿಟ್ಟು ತಿನ್ನೋಣ ಬಾ) ಎಂಬುದಾಗಿ ಸ್ವಾಗತಿಸಿದರು. ಅವರು ಜೈಲಿಗೆ ಹೋದಾಗ, ಅಲ್ಲಿ ಶ್ರೀ ಕೆ.ಟಿ.ಭಾಷ್ಯಂ, ಶ್ರೀ ಚೆಂಗಲರಾಯರೆಡ್ಡಿ, ಶ್ರೀ ಟಿ.ಸಿದ್ದಲಿಂಗಯ್ಯ ಮುಂತಾದ ನಾಯಕರಿದ್ದರು. ಮಾರನೆಯ ದಿನ ಪತ್ರಿಕಾ ಸಂಪಾದಕರಗಳನ್ನೆಲ್ಲಾ, ಅಂದರೆ 'ತಾಯಿನಾಡು' ಸಂಪಾದಕರಾದ ಶ್ರೀ ಪಿಆರ್.ರಾಮಯ್ಯ, 'ವಿಶ್ವ ಕರ್ನಾಟಕ' ಸಂಪಾದಕರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮ (ತಿತಾ ಶರ್ಮ), ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ, 'ಜನವಾಣಿ' ಸಂಪಾದಕರಾದ ಶ್ರೀ ಬಿ.ಎನ್.ಗುಪ್ತ ಅವರನ್ನು ದಸ್ತಗಿರಿ ಮಾಡಿ ಸೆಂಟ್ರಲ್ ಜೈಲಿಗೆ ಕರೆದುಕೊಂಡು ಬಂದರು. ವಿದ್ಯಾರ್ಥಿಗಳನ್ನು ಕಾಂಗ್ರೆಸ್‌ನವರ ಜೊತೆಗೆ ಇಡುವುದು ಸೂಕ್ತವಲ್ಲವೆಂದು ಭಾವಿಸಿ, ಅವರನ್ನೆಲ್ಲಾ (ಸುಮಾರು ೨೫ ವಿದ್ಯಾರ್ಥಿಗಳು) ಆನೇಕಲ್ ಸಮೀಪದಲ್ಲಿರುವ ಅತ್ತಿಬೆಲೆ ಎಂಬ ಊರಿನ ಛತ್ರಕ್ಕೆ ಸಾಗಿಸಿದರು. ಅಲ್ಲಿ ಊಟ–ವಸತಿಗಳಿಗೆ ಅನುಕೂಲಗಳಿರಲಿಲ್ಲ. ಅವರನ್ನು ಅಲ್ಲಿಂದ ಸಾಗಿಸಿ ಸರಿಯಾದ ಜೈಲಿನಲ್ಲಿಡಬೇಕೆಂದು ಕೇಳಿದರು. ಅಧಿಕಾರಿಗಳು ಅದಕ್ಕೆ ಒಪ್ಪಲಿಲ್ಲ. ಎರಡು ದಿವಸ ಉಪವಾಸ ಮಾಡಿದ ಮೇಲೆ ಅವರೆಲ್ಲರನ್ನು ಪುನಃ ಸೆಂಟ್ರಲ್ ಜೈಲಿಗೆ

ರವಾನಿಸಿದರು. ಅಷ್ಟು ಹೊತ್ತಿಗೆ ಮತ್ತೂ ೭೦–೮೦ ವಿದ್ಯಾರ್ಥಿಗಳು ಸೆಂಟ್ರಲ್ ಜೈಲಿಗೆ ಹೊಸದಾಗಿ ಬಂದಿದ್ದರು. ವಿದ್ಯಾರ್ಥಿಗಳನ್ನು ರಾಜಕೀಯ ವ್ಯಕ್ತಿಗಳ ಪ್ರಭಾವದಿಂದ ತಪ್ಪಿಸಲು ಮಾರನೆಯ ದಿನವೇ ಅವರೆಲ್ಲರನ್ನು ವ್ಯಾನುಗಳಲ್ಲಿ ತುಂಬಿಕೊಂಡು ಮೈಸೂರು ಜೈಲಿಗೆ ಸಾಗಿಸಿದರು. ಅಷ್ಟು ಹೊತ್ತಿಗಾಗಲೇ ಆ ಜೈಲಿನಲ್ಲಿ ಬಹುಮಂದಿ ವಿದ್ಯಾರ್ಥಿಗಳಿದ್ದರು. ಅನೇಕ ವಿದ್ಯಾರ್ಥಿಗಳನ್ನು ಮೈಸೂರು ಜೈಲಿಗೆ ಕಳುಹಿಸುತ್ತಿದ್ದರು. ಅವರಲ್ಲಿ ಬಹುಮಂದಿ ಡೆಟಿನ್ಯೂಗಳು (Detenue). ಅಂದರೆ, ಅವರ ಮೇಲೆ ಇನ್ನೂ ಮೊಕದ್ದಮೆ ಹೂಡಿರಲಿಲ್ಲ. ಕೆಲವರ ಮೇಲೆ ಕಾಯಿದೆ ಪ್ರಕಾರ ಮೊಕದ್ದಮೆ ಹೂಡಿದ್ದರು. ಇಂತಹವರು ಅಂಡರ್ ಟ್ರಯಲ್ (Under Trials).

## ಗಾಂಧೀಜಿಯವರ ಉಪವಾಸ ಸತ್ಯಾಗ್ರಹಕ್ಕೆ ಬೆಂಗಳೂರಿನಿಂದ ಬೆಂಬಲ

ಸರ್ಕಾರದ ಅಮಾನುಷ ದೌರ್ಜನ್ಯಗಳನ್ನು ಮತ್ತು ಅದರ ಧೋರಣೆಯನ್ನು ಪ್ರತಿಭಟಿಸಿ ೧೯೪೩ ನೆ ಫೆಬ್ರವರಿ ೯ ನೆಯ ತಾರೀಖಿನಿಂದ ಗಾಂಧೀಜಿಯವರು ೨೧ ದಿನಗಳ ಕಾಲ ಪೂನಾದಲ್ಲಿರುವ ಆಗಾಖಾನ್ ಅರಮನೆಯಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಸರಕಾರದ ದುರ್ವರ್ತನೆಯನ್ನು ಖಂಡಿಸಲು ಮತ್ತು ಗಾಂಧೀಜಿಯವರ ನಿಲುವನ್ನು ಸಮರ್ಥಿಸಲು ದೇಶದಾದ್ಯಂತ ಸತ್ಯಾಗ್ರಹದ ಎರಡನೇ ಅಲೆಯು ಪ್ರಾರಂಭವಾಯಿತು. ಅಜ್ಞಾತವಾಸದಲ್ಲಿದ್ದ ನಾಯಕರು ಪೂನಾಕ್ಕೆ ಸತ್ಯಾಗ್ರಹಗಳ ಸತ್ಯಾಗ್ರಹಿಗಳ ತಂಡವನ್ನು ಕಳುಹಿಸಿ ಅಲ್ಲಿ ಜಾರಿಯಲ್ಲಿದ್ದ ೫ ಜನಕ್ಕಿಂತ ಹೆಚ್ಚು ಮಂದಿ ಸೇರಬಾರದೆಂಬ ೧೪೪ ನೆಯ ಸೆಕ್ಷನ್ ಪ್ರತಿಬಂಧಕಾಜ್ಞೆಯನ್ನು ಮುರಿಯಬೇಕೆಂದು ಕರೆಯಿತ್ತರು. ರಾಷ್ಟ್ರಮಟ್ಟದಲ್ಲಿ ಅಜ್ಞಾತವಾಸದಲ್ಲಿದ್ದ ನಾಯಕರಲ್ಲಿ ಶ್ರೀ ಜಯಪ್ರಕಾಶ್ ನಾರಾಯಣರು ಅಗ್ರಗಣ್ಯರು. ಅವರನ್ನು ಬಿಹಾರ ತಂಡದ ಹಜಾರಿಬಾಗ್ ಜೈಲಿನಲ್ಲಿಟ್ಟಿದ್ದರು. ಆ ಜೈಲಿನ ಅಗಾಧವಾದ ಗೋಡೆಯನ್ನು ಹತ್ತಿ, ಅಲ್ಲಿಂದ ಇಳಿದೋ ಧುಮುಕಿಯೋ ತಪ್ಪಿಸಿಕೊಂಡು ಹೋಗಿ ಭೂಗತರಾಗಿ (Underground) ಚಳುವಳಿ ಮುಂದುವರೆಸಿದರು. ಅವರ ಸುಳಿವನ್ನು ಕೊಟ್ಟವರಿಗೆ ೧೦,೦೦೦/– ರೂಪಾಯಿಗಳ ಬಹುಮಾನ ಕೊಡುತ್ತೇವೆಂದು ಸರ್ಕಾರ ಘೋಷಿಸಿತ್ತು. ನರಸಿಂಹಯ್ಯನವರು ಒಂದು ಸಲ ಜೈಲಿಗೆ ಹೋಗಿ ಬಂದಿದ್ದರೂ, ಸ್ವಾತಂತ್ರ್ಯ



ಸಂಗ್ರಾಮದಲ್ಲಿ ಭಾಗವಹಿಸುವ ಬದ್ಧತೆ ಮತ್ತು ಉತ್ಸಾಹ ಕುಂದಿರಲಿಲ್ಲ. ಪೂನಾಕ್ಕೆ ಹೋಗಲು ನಿಶ್ಚಯಿಸಿದರು. ಬೆಂಗಳೂರಿನಲ್ಲಿ ಅಜ್ಞಾತವಾಸದಲ್ಲಿದ್ದ ಶ್ರೀ ಕೆ.ವಿ.ವೆಂಕಟರಾಮಯ್ಯನವರನ್ನು ಸಂಪರ್ಕಿಸಿದರು. ಪೂನಾಕ್ಕೆ ಬರಲು ಒಪ್ಪಿದ ಆರು ವಿದ್ಯಾರ್ಥಿಗಳನ್ನು ಹುಡುಕಿದರು. ನಾಯಕರಿಂದ ಪೂನಾಕ್ಕೆ ಹೋಗಿ ಬರುವ ರೈಲಿನ ಪ್ರಯಾಣದ ಖರ್ಚನ್ನು ಪಡೆದರು.

ಪೂನಾಕ್ಕೆ ಹೋಗುವ ದಿನ ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಗೆ ಬಸವನಗುಡಿಯ ದೊಡ್ಡ ಬಸವಣ್ಣನ ದೇವಸ್ಥಾನದ ರಸ್ತೆಯಲ್ಲಿದ್ದ ಮತ್ತು ನ್ಯಾಷನಲ್ ಹೈಸ್ಕೂಲು ಸಂಸ್ಥೆಗಳಿಗೆ ತುಂಬಾ ಸಮೀಪದಲ್ಲಿ ರಾಘವನ್ ಅವರ ಮನೆಗೆ ಹೋಗಿ ಒಳಗಿದ್ದವರನ್ನು ಕೂಗಿದರು. ಅವರ ತಾಯಿ ಹೊರಗೆ ಬಂದರು. ಬೆಳಕಿನ್ನೂ ಮೂಡದ ಆ ಹೊತ್ತಿನಲ್ಲಿ ನರಸಿಂಹಯ್ಯನವರನ್ನು ನೋಡಿ ಅವರು ಆಶ್ಚರ್ಯಪಟ್ಟರು. ಬೆಳಿಗ್ಗೆ ಏಳು ಗಂಟೆಗೆ ರೈಲಿನಲ್ಲಿ ಪೂನಾಕ್ಕೆ ಹೋಗುವ ವಿಷಯವನ್ನು ತಿಳಿಸಿದರು. ಅವರು, "ಅಯ್ಯೋ ಇದೇನಪ್ಪಾ? ಮೊನ್ನೆ ತಾನೇ ಜೈಲಿನಿಂದ ಬಂದಿರಿ. ಪುನಃ ದೂರದ ಊರಿಗೆ ಹೋಗುತ್ತಿದ್ದೀರಲ್ಲ" ಎಂದು ಆತಂಕದಿಂದ ಕೇಳಿದರು. ಆಗ ನರಸಿಂಹಯ್ಯನವರು, "ನಾನು ಹೋಗಲೇ ಬೇಕು. ಅದರಿಂದ ಕಸ್ತೂರಿ, ನರಸಿಂಹನ್‌ಗೆ ಪರೀಕ್ಷೆಯ ಸಮಯದಲ್ಲಿ ಅನಾನುಕೂಲವಾಗುತ್ತದೆ. ಕರ್ತವ್ಯಲೋಪ ಮಾಡುತ್ತಿದ್ದೇನೆಂದು ಮನಸ್ಸಿಗೆ ನೋವಾಗುತ್ತದೆ" ಎಂದರು. "ಅಯ್ಯೋ ಪರವಾಗಿಲ್ಲ. ನೀವು ಎಲ್ಲವನ್ನೂ ಬಿಟ್ಟು ಪುನಃ ಜೈಲಿಗೆ ಹೋಗುತ್ತಿರುವುದು ದೊಡ್ಡ ಕೆಲಸ. ನಮ್ಮ ಮಕ್ಕಳು ಹೇಗಾದರೂ ಓದಿಕೊಳ್ಳುತ್ತಾರೆ. ಹೋಗಿ ಬಿಟ್ಟು ಬನ್ನಿ, ಒಳ್ಳೆಯದಾಗಲಿ" ಎಂದು ಹೇಳಿ ಕಳುಹಿಸಿದರು. ನರಸಿಂಹಯ್ಯನವರು ಕಸ್ತೂರಿ ಹಾಗೂ ನರಸಿಂಹನ್ ಅವರಿಗೆ ಪಾಠ ಹೇಳಿಕೊಡುತ್ತಿದ್ದರು. ತಮ್ಮ ಖರ್ಚಿಗೆ ಅವರು ಹಾಕಿಕೊಂಡ ಪರಿಪಾಠವದು. ಇನ್ನೊಂದು ಪಾಠದ ಮನೆ ಶಂಕರಪುರದಲ್ಲಿದ್ದ ಡಾ॥ ಸಿ.ನಾರಾಯಣರಾವ್ ಅವರದ್ದು. ಅವರ ಒಬ್ಬ ಮಗಳು ಮತ್ತು ಒಬ್ಬ ಮಗನಿಗೆ ಪಾಠ ಹೇಳುತ್ತಿದ್ದರು ನರಸಿಂಹಯ್ಯನವರು. ಆ ಮಕ್ಕಳು ಹೈಸ್ಕೂಲ್ ಮತ್ತು ಕಾಲೇಜಿನಲ್ಲಿ ಓದುತ್ತಿದ್ದರು. ಅವರ ಮನೆಗೂ ಹೋಗಿ ವಿಷಯ ಹೇಳಿ ರೈಲಿನಲ್ಲಿ ಗುಂತಕಲ್ ಮಾರ್ಗವಾಗಿ ಕಾಣದ ಪೂನಾ ಕಡೆ ಹೊರಟರು.

ಪೂನಾದಲ್ಲಿ ಇಳಿದು ಜನನಿಬಿಡವಾದ ಒಂದು ರಸ್ತೆಯಲ್ಲಿ "ಗಾಂಧೀಜಿಯನ್ನು ಬಿಡುಗಡೆ ಮಾಡಿ"; "ಸರಕಾರಕ್ಕೆ ಧಿಕ್ಕಾರ" ಎಂಬ ಇಂಗ್ಲಿಷ್ ಫಲಕಗಳನ್ನು ಹಿಡಿದು, ಘೋಷಣೆ ಕೂಗುತ್ತಾ ಮೆರವಣಿಗೆ ಹೊರಟರು. ಕೆಲವು ಗಜ ಹೋಗುವಷ್ಟರಲ್ಲಿ ಪೊಲೀಸ್ ವ್ಯಾನು ಬಂದಿತು. ಇನ್ಸ್‌ಪೆಕ್ಟರ್ ಅವರನ್ನು ದಸ್ತಗಿರಿ ಮಾಡಿ ವ್ಯಾನಿನಲ್ಲಿ ಕೂಡಿಸಿದರು. ಅವರು ಬಂದ ಕೆಲಸ ಆಗಿತ್ತು. ೧೪೪ ನೇ ಸೆಕ್ಷನ್ ಅನ್ನು ಉಲ್ಲಂಘಿಸಿದ್ದರು, ದಸ್ತಗಿರಿಯಾಯಿತು. ವ್ಯಾನಿನಲ್ಲಿ ಸಂತೋಷದಿಂದ ಮಾತನಾಡಿಕೊಂಡರು. "ನೀವು ಕನ್ನಡ ಮಂದೀನ? ಎಲ್ಲಿಂದ ಬಂದಿದ್ದೀರಿ?" ಇನ್ಸ್‌ಪೆಕ್ಟರ್ ಕೇಳಿದರು. ಅವರು ಧಾರವಾಡದವರೆಂದು ತಿಳಿಯಿತು. "ಬೆಂಗಳೂರಿನಿಂದ ಬಂದಿದ್ದೇವೆ. ನಾವೆಲ್ಲಾ ವಿದ್ಯಾರ್ಥಿಗಳು" ಎಂದರು. "ಕ್ಷಮಾಪಣೆ ಪತ್ರ ಬರೆದು ಕೊಡಿ. ನಿಮ್ಮನ್ನೆಲ್ಲಾ ಬಿಡುಗಡೆ ಮಾಡುತ್ತೇವೆ" ಎಂದರು. ಅಲ್ಲಿಂದ ಮುಂದೆ ಯರವಾಡ ಜೈಲಿಗೆ ಕರೆದುಕೊಂಡು ಹೋಗಲಾಯಿತು. ಜೂನ್ ತಿಂಗಳ ಕೊನೆಗೆ ಅವರ ಶಿಕ್ಷೆ ಮುಗಿಯಲು ಬೆಂಗಳೂರಿಗೆ ವಾಪಸ್ ಬಂದರು.

ನರಸಿಂಹಯ್ಯನವರ ಈ ಕೆಳಕಂಡ ನುಡಿಗಳು ಮನ ಮಿಡಿಯುವಂಥವು: "ಕ್ವಿಟ್ ಇಂಡಿಯಾ ಮತ್ತು ಅದರ ಹಿಂದೆ ನಡೆದ ಸಾಕಷ್ಟು ಚಳುವಳಿಗಳಲ್ಲಿ ಸಹಸ್ರಾರು ಜನರು ಭಾಗವಹಿಸಿ ಜೈಲಿಗೆ ಹೋದರು, ಕಷ್ಟನಷ್ಟಗಳನ್ನು ಅನುಭವಿಸಿದರು. ಪ್ರಾಣಾರ್ಪಣೆ ಮಾಡಿದವರ ಸಂಖ್ಯೆಯೇನೂ ಕಡಿಮೆಯಿಲ್ಲ. ಆದರೆ ಒಂದು ನೋವಿನ ಸಂಗತಿಯೆಂದರೆ ಲಾಠಿಚಾರ್ಜ್ ಮಾಡಿದವರು, ಗೋಲಿಬಾರ್ ಮಾಡಿದವರು, ಶಿಕ್ಷೆ ಕೊಟ್ಟ ನ್ಯಾಯಾಧೀಶರು, ಎಲ್ಲರೂ ನಮ್ಮವರೇ, ಭಾರತೀಯರೇ! ವಿವಿಧ ಕ್ಷೇತ್ರಗಳ ಬುದ್ಧಿಜೀವಿಗಳಿಂದ ನಿರೀಕ್ಷಿತ ಮಟ್ಟದಲ್ಲಿ ಸಹಕಾರ ಸಿಗಲಿಲ್ಲ. ಪೊಲೀಸು, ನ್ಯಾಯಾಂಗ, ಸರ್ಕಾರಿ ನೌಕರರು, ಕಾಲೇಜು ಅಧ್ಯಾಪಕರು, ಸಾಹಿತಿಗಳು ಮತ್ತು ಇತರ ಬುದ್ಧಿಜೀವಿಗಳಿಂದ ಶೇಕಡಾ ಐದರಷ್ಟು ಸಕ್ರಿಯವಾದ ಸಹಕಾರ ಸಿಕ್ಕಿದ್ದರೆ ಚಳುವಳಿ ಎಂಟು ದಿನಗಳಿಗೇ ಮುಗಿಯುತ್ತಿತ್ತು. ಒಟ್ಟಿನಲ್ಲಿ ನಮ್ಮ ರಾಷ್ಟ್ರೀಯತೆ ಬಗ್ಗೆ, ದೇಶಭಕ್ತಿ ಬಗ್ಗೆ ಏನೇ ಜಂಭ ಕೊಚ್ಚಿಕೊಂಡರೂ ಅದೆಲ್ಲ ಬಹುತೇಕ ಬೊಗಳೆ ಮಾತಾಗುತ್ತದೆ. ಬಹು ಮಂದಿ ಭಾರತೀಯರಲ್ಲಿ ಗುಲಾಮಗಿರಿಯ ರಕ್ತ ಇನ್ನೂ ಹರಿಯುತ್ತಿದೆ. ಆದುದರಿಂದಲೇ ನಾವು ರಾಜಕೀಯವಾಗಿ ಸ್ವಾತಂತ್ರ್ಯ ಕರೆದುಕೊಂಡದ್ದು.



ಸ್ವಾಭಿಮಾನ ದೇಶಾಭಿಮಾನ ಗಣನೀಯವಾದ ಪ್ರಮಾಣದಲ್ಲಿ ಇದ್ದಿದ್ದರೆ, ನಾವು ಖಂಡಿತವಾಗಿಯೂ ಇಂಗ್ಲಿಷಿನವರಿಗಾಗಲೀ ಅಥವಾ ಇನ್ನಾವುದೇ ಪರದೇಶದವರಿಗಾಗಲಿ ಗುಲಾಮರಾಗಬೇಕಾಗಿರಲಿಲ್ಲ". ಎನ್ನುವ ಅವರ ಮಾತುಗಳು ನೂರಕ್ಕೆ ನೂರು ಸತ್ಯ.

## ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಇತರ ಮಹನೀಯರು

ಗಾಂಧೀಜಿಯವರ ಭೇಟಿಯ ನಂತರ ಹಲವಾರು ಮಂದಿ ಸ್ವಾತಂತ್ರ ಸಂಗ್ರಾಮದಲ್ಲಿ ಧುಮುಕಿದರು. ಅವರಲ್ಲಿ ಹಲವು ಮಹನೀಯರ ಬಗ್ಗೆ ವಿಷಯಗಳನ್ನು ತಿಳಿದುಕೊಳ್ಳುವುದು ಉಚಿತವೆನಿಸುತ್ತದೆ

**೧. ಬಿ.ಎನ್.ಗುಪ್ತ:** ಆಂಧ್ರಪ್ರದೇಶದ ಚಿತ್ತೂರಿನಲ್ಲಿ ೧೦-೧೨-೧೮೮೫ ರಲ್ಲಿ ಜನಿಸಿದ ಬೈಸಾನಿ ನರಸಿಂಹೇಶ್ವರ ಗುಪ್ತರು ಮದ್ರಾಸಿನಲ್ಲಿ ಶಿಕ್ಷಣ ಪಡೆದರು. ಪುಸ್ತಕಗಳನ್ನು ಓದುವ ಗೀಳನ್ನು ಹತ್ತಿಸಿಕೊಂಡಿದ್ದ ಅವರು, ಶಿಕ್ಷಣದಲ್ಲಿ ಆಸ್ಥೆ ಹೊಂದಿದ್ದರಿಂದ ತಮ್ಮ ಮಾಸ್ತರರ ಮರ್ಜಿ ಕಾಯುವ ಸ್ವಭಾವದವರಾಗಿದ್ದರು. ಹೀಗಾಗಿ, ಮದ್ರಾಸಿಗೆ ಬರುವ ಗಣ್ಯರನ್ನು ಮಾಸ್ತರರು ಶ್ರೀಮಂತರಾದ ಗುಪ್ತರ ಮನೆಗೆ ಅತಿಥಿಗಳಾಗಿ ಕಳುಹಿಸುತ್ತಿದ್ದರಂತೆ. ಬಂದ ವ್ಯಕ್ತಿಗಳಲ್ಲಿ ಗಣ್ಯರೆಂದರೆ ಬಿಪಿನ್ ಚಂದ್ರಪಾಲರು. ಇವರ ಜತೆಗೆ ಗುಪ್ತರು ಭಾರತದ ಅನೇಕ ಭಾಗಗಳಲ್ಲಿ ಸುತ್ತಿದರು. ಈ ಪ್ರವಾಸದಿಂದ ಪಡೆದ ಲೋಕಾನುಭವದಿಂದ ಮೆಟ್ರಿಕ್ ಪೂರೈಸಿದ್ದ ಇವರಿಗೆ ಆನಿಬೆಸೆಂಟರ ಪತ್ರಿಕಾ ಶಿಕ್ಷಣ ಕಾಲೇಜಿನಲ್ಲಿ ಶಿಕ್ಷಣ ನಡೆಸಲು ಅವಕಾಶ ದೊರೆಯಿತು. ಇದರಿಂದಾಗಿ ಮುಂದೆ ಮದ್ರಾಸಿನಲ್ಲಿಯೇ ಪತ್ರಿಕೋದ್ಯಮದ ಬಗ್ಗೆ ಸಾಕಷ್ಟು ಅನುಭವ ಪಡೆಯಲು ಸಾಧ್ಯವಾಯಿತು. ಜಾರ್ಜ್ ಅರುಂಡೇಲ್ ಸಂಪಾದಕರಾಗಿರುವ ಒಂದು ಶಿಕ್ಷಣ ಸಂಬಂಧಿ ಇಂಗ್ಲಿಷ್ ಪತ್ರಿಕೆಯನ್ನು ಗುಪ್ತರು ಆರಂಭಿಸಿದರೂ ಅದು ನಷ್ಟಕ್ಕೊಳಗಾಯಿತು. ಕಡೆಗೆ ಟ್ಯಾಗೂರ್ ಅಂಡ್ ಕಂಪೆನಿ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿದರು. ಬಿಪಿನ್ ಚಂದ್ರ ಪಾಲ್, ಲಾಲಾ ಹರದಯಾಳ್ ಅಂತಹ ಕ್ರಾಂತಿಕಾರಿಗಳ ಅನೇಕ ಗ್ರಂಥಗಳನ್ನು ಪ್ರಕಟಿಸಿದರು.

ಮದ್ರಾಸಿನ ಒಂದು ಪತ್ರಿಕೆಯ ಪ್ರತಿನಿಧಿಯಾಗಿ ಹಾಗೂ ಟ್ಯಾಗೂರ್ ಅಂಡ್ ಕಂಪೆನಿಯ ಮಾರಾಟಗಾರರಾಗಿ ೧೯೨೮ ರಲ್ಲಿ ಬೆಂಗಳೂರಿಗೆ ಬಂದ

ಗುಪ್ತರು, ಎಚ್.ಕೆ.ವೀರಣ್ಣಗೌಡರು ನಡೆಸುತ್ತಿದ್ದ ಮುದ್ರಣಾಲಯವೊಂದರಿಂದ ಅವರ ನಿಕಟ ಸಂಪರ್ಕಕ್ಕೆ ಬಂದರು. ಗುಪ್ತರೂ ನೀಲಗಿರಿ ಸಂಜೀವಯ್ಯ ಎಂಬುವರೂ ಪ್ರೋತ್ಸಾಹ ನೀಡಿ ವೀರಣ್ಣಗೌಡರು 'ಚಿತ್ರಗುಪ್ತ' ಎಂಬ ಹೆಸರಿನ ದಿನಪತ್ರಿಕೆಯನ್ನು ಡಿಸೆಂಬರ್ ೧೯೨೮ ರಲ್ಲಿ ಆರಂಭಿಸಲು ಕಾರಣರಾದರು.

ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯತೆಯ ಉಗಮದ ಜೊತೆಗೆ ಆ ಕಾಲದಲ್ಲಿ ತೀರಾ ಹಿಂದುಳಿದಿದ್ದ ಜನತೆಯ ಕೆಲವು ಗುಂಪುಗಳನ್ನು ತಮ್ಮ ಹಕ್ಕು ಬಾಧ್ಯತೆಗಳತ್ತ ಜಾಗೃತಗೊಳಿಸಿ ಹೋರಾಡಲು ಉತ್ತೇಜಿಸಿದ ಕೆಲವು ಪ್ರಮುಖ ವ್ಯಕ್ತಿಗಳು, ಈ ಸಂದರ್ಭದಲ್ಲಿ ನಡೆದ ಪ್ರಕರಣಗಳು, ಸಂಸ್ಥಾನದ ಅಂದಿನ ಜನಜೀವನದಲ್ಲಿ ಗಮನಾರ್ಹವೆಂದೇ ಹೇಳಬೇಕು. ಕೊನೆಯದಾಗಿ ಈ ಎಲ್ಲ ಚಳವಳಿಗಳ ಪ್ರಭಾವ ಕಾಂಗ್ರೆಸ್ಸಿನಲ್ಲಿ ಐಕ್ಯವಾಗಿ ಜವಾಬ್ದಾರಿ ಸರಕಾರದ ಹಾಗೂ ಸ್ವಾತಂತ್ರ್ಯದ ಬೇಡಿಕೆಗೆ ಹೆಚ್ಚಿನ ಬಲ ಬಂದದ್ದು ಗಮನಾರ್ಹ ಅಂಶ. ಈ ಚಳುವಳಿಗಳ ಕೆಲ ನಾಯಕರು ಮಾತ್ರ ಕಡೆಗೂ ಕಾಂಗ್ರೆಸ್ಸಿನಿಂದ ದೂರ ಉಳಿದರು.

ಹಿಂದುಳಿದ ಜನಾಂಗಗಳಲ್ಲಿ ಅವರ ಆಶೋತ್ತರಗಳನ್ನು ಜಾಗೃತಗೊಳಿಸಲು ಮುಖಂಡರಿಗೆ ಇದ್ದ ಒಂದು ಸಾಧನವೆಂದರೆ ಕೋಮುವಾರು ನ್ಯಾಯ ಭಾವನೆಯ ಪ್ರಚೋದನೆ. ಚಳುವಳಿಯನ್ನು ಆರಂಭಿಸಿದ ಹಿರಿಯ ಮುಖಂಡರಿಗೆ ಆ ಜನಾಂಗಗಳಲ್ಲಿದ್ದ ಕೆಲವು ವಿದ್ಯಾವಂತರು, ಸುಶಿಕ್ಷಿತರು ಮತ್ತು ವಿವೇಚನಾಪರರು ಬೆಂಬಲವಿತ್ತರು.

ಅಖಿಲ ಹಿಂದೂಸ್ಥಾನದಲ್ಲಿ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸು ಚಳವಳಿ ನಡೆಸಿತ್ತು. ಆಗಿನ್ನೂ ಈ ಚಳವಳಿ ಉಗ್ರವಾಗಿರಲಿಲ್ಲ. ಇದೇ ಕಾಲಕ್ಕೆ ಒಂದೆರಡು ಪ್ರಾಂತಗಳಲ್ಲಿ ಬೇರೊಂದು ಬಗೆಯ ಚಳುವಳಿ ಪ್ರಾರಂಭವಾಗಿತ್ತು. ಇದು ಕೋಮುವಾರು ನ್ಯಾಯಕ್ಕಾಗಿ ಬ್ರಾಹ್ಮಣೇತರ ಚಳುವಳಿ ಎಂದು ಪ್ರಸಿದ್ಧಿ ಪಡೆಯಿತು. ಮುಖ್ಯವಾಗಿ ಮುಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಈ ಚಳುವಳಿ ಉಗ್ರಸ್ವರೂಪ ಕಂಡಿತು. ಸರ್ಕಾರಿ ಉದ್ಯೋಗಗಳಲ್ಲಿ ಬ್ರಾಹ್ಮಣರದ್ದೆ ಮೇಲ್ಗೈ ಇದ್ದು, ಮಿಕ್ಕ ಕೋಮುಗಳಿಗೆ ತೀರಾ ಅನ್ಯಾಯವಾಗಿದೆ ಎಂಬುದು ಚಳವಳಿ ನಾಯಕರ ವಿಚಾರವಾಗಿತ್ತು. ಬ್ರಾಹ್ಮಣೇತರರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯಬೇಕೆಂದು



ಸಾರ್ವಜನಿಕವಾಗಿ ಶಾಸನಸಭೆಗಳ ಮೂಲಕವಾಗಿ ಗುಲ್ಲೆದ್ದಿತು. ಮದ್ರಾಸಿನಲ್ಲಿ ಆನಿ ಬೆಸೆಂಟರ ಹೋಂ ರೂಲ್ ಚಳವಳಿ ಆರಂಭವಾದಾಗ, ಇಂಥ ಚಳುವಳಿಗೆ ಒಂದು ರಾಜಕೀಯ ಸ್ವರೂಪ ಬಂತು. ಮುಂದೆ ಜಸ್ಟೀಸ್ ಪಕ್ಷದ ಸ್ಥಾಪನೆಯೂ ಆಯಿತು.

ಈ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನ ಮದ್ರಾಸಿನ ನೆರೆ ನಾಡಾಗಿ, ಅಲ್ಲಿನ ಚಳುವಳಿಯಿಂದ ಸ್ಫೂರ್ತಿ ಪಡೆಯಿತು. ಅಲ್ಲಿನ ಮತ್ತು ಇಲ್ಲಿನ ಬ್ರಾಹ್ಮಣೇತರ ಮುಖಂಡರಲ್ಲಿ ವಿಚಾರ ವಿನಿಮಯವೂ ನಡೆದಿತ್ತು. 'ಜಸ್ಟೀಸ್' ದಿನಪತ್ರಿಕೆಯ ಪ್ರಭಾವವು ಇದ್ದೇ ಇತ್ತು. 'ಜಸ್ಟೀಸ್' ಮತ್ತು ಆನಿ ಬೆಸೆಂಟರ 'ನ್ಯೂ ಇಂಡಿಯಾ'ಗಳ ನಡುವೆ ವಾಗ್ವಾದಗಳು ಆಗುತ್ತಿದ್ದವು. ಜಸ್ಟಿಸ್ ಪಕ್ಷ ಮದ್ರಾಸಿನಲ್ಲಿ ಕೆಲ ಕಾಲ ಆಡಳಿತವನ್ನು ನಡೆಸಿತು. ಆದರೆ ಮುಂದೆ ರಾಷ್ಟ್ರೀಯವಾದಿಗಳ ಮೇಲಿನ ಮೇಲುಗೈ ಆಗಿ ಜಸ್ಟಿಸ್ ಪಕ್ಷ ಕಣ್ಮರೆಯಾಯಿತು. ಮೈಸೂರಿನಲ್ಲಿಯೂ ಇದೇ ರೀತಿ ಕಾಲಚಕ್ರ ತಿರುಗಿತು.

'ಜಸ್ಟಿಸ್' ಪತ್ರಿಕೆಯ ಸಂಪಾದಕರಾದ ತರುಣ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರ ಪ್ರಭಾವ ಮೈಸೂರಿನ ಸುಶಿಕ್ಷಿತರ ಮೇಲೂ ಆಯಿತು. ಅದರಿಂದಲೇ ಸ್ಫೂರ್ತಿ ಪಡೆದು ೧೯೧೭ ರ ಕೊಯಲ್ಲಿ 'ಪ್ರಜಾಮಿತ್ರ ಮಂಡಲಿ' ಉದಿಸಿತು. ಇದರ ಸ್ಥಾಪನೆಯಲ್ಲಿ ಅಗ್ರ ಪಾತ್ರ ವಹಿಸಿದವರು ಎಂ.ಬಸವಯ್ಯ, ಎಂ.ಸುಬ್ಬಯ್ಯ, ರಾವ್ ಸಾಹೇಬ್ ಎಚ್.ಚೆನ್ನಯ್ಯ ಮತ್ತು ಗುಲಾಮ್ ಅಹ್ಮದ್ ಕಲಾಮಿ. ಈ ಸಂಸ್ಥೆ ಹಿಂದುಳಿದ ವರ್ಗಗಳ ಏಳಿಗೆಗೆ, ಅವರ ಹಕ್ಕುಬಾಧ್ಯತೆಗಳ ರಕ್ಷಣೆಗೆ ಹೋರಾಟ ನಡೆಸಿದ್ದರೆ ಅದನ್ನು ಯಾರು ಬಹುಶಃ ಅಷ್ಟೊಂದು ವಿರೋಧಿಸುತ್ತಿರಲಿಲ್ಲ. ಆದರೆ ಕೋಮುವಾರು ನ್ಯಾಯದ ಹೆಸರಿನಲ್ಲಿ ನಿರಂತರವೂ ಒಂದು ಕೋಮಿನ ಬಗ್ಗೆ ಮಾತಿನಲ್ಲಿ ಮತ್ತು ಕೃತಿಯಲ್ಲಿ ಹಗೆತನ ವ್ಯಕ್ತಪಡಿಸಿದ ನಿಮಿತ್ತ ಕೆಲವೆಡೆಗಳಲ್ಲಿ ತೀವ್ರ ಅಸಮಾಧಾನ ಮಾತ್ರವಲ್ಲ ಖಂಡನೆ ಮತ್ತು ಪ್ರತಿಭಟನೆಗಳು ಕಾಣಿಸಿಕೊಂಡವು. ಹೀಗಾಗಿ ಈ ಚಳುವಳಿ ಬಗ್ಗೆ ಅಲ್ಲಲ್ಲಿ ಪ್ರತಿಭಟನೆ ಇದ್ದುದು ವಾಸ್ತವ.

ಈ ಕೋಮುವಾದಿ ಚಳುವಳಿಗಳು ಹೊರ ಪ್ರಾಂತಗಳಲ್ಲಿ ಸ್ವಾತಂತ್ರ್ಯ ಚಳುವಳಿಯನ್ನೇ ವಿರೋಧಿಸಿದವು. ಅದರಂತೆ ಮೈಸೂರಿನ ಜವಾಬ್ದಾರಿ

ಸರ್ಕಾರದ ಬೇಡಿಕೆ, ಪ್ರಜಾ ತಾಂತ್ರಿಕ ಸುಧಾರಣೆಗಳ ಬೇಡಿಕೆಯನ್ನು ಈ ಚಳುವಳಿ ವಿರೋಧಿಸಿತು. ಬೇರೆ ಪ್ರಾಂತಗಳಲ್ಲಿ ಇವರು ಬ್ರಿಟಿಷರಿಗೆ ಬೆಂಬಲವಾಗಿ ನಿಂತರು. ಮೈಸೂರಿನ ಆರಂಭದ ದಿನಗಳಲ್ಲಿ ಈ ಚಳುವಳಿಯು ಇದೇ ರೀತಿ ಆಡಳಿತಕ್ಕೆ ಬೆಂಬಲವಾಗಿ ನಿಂತಿತು. ಮೈಸೂರು ನಗರದಿಂದ ಹೊರಡುತ್ತಿದ್ದ 'ಮೈಸೂರು ಸ್ಟಾರ್' ವಾರಪತ್ರಿಕೆಯು ಪ್ರಜಾಮಿತ್ರ ಮಂಡಳಿಯ ವಿಚಾರ ಧೋರಣೆಗಳನ್ನು ಸಂಪೂರ್ಣವಾಗಿ ಪುಷ್ಟೀಕರಿಸುತ್ತಿತ್ತು. ಜಿ.ವಿರೂಪಾಕ್ಷಯ್ಯ ಅದರ ಸಂಪಾದಕರು. ಈ ಪತ್ರಿಕೆಯಲ್ಲಿ ಆಂಗ್ಲ ಲೇಖನಗಳು ಪ್ರಕಟವಾಗುತ್ತಿದ್ದವು. ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ಗುಪ್ತ ನಾಮಧೇಯದಲ್ಲಿ ಮಂಡಲಿಯ ನೀತಿಗಳನ್ನು ಎತ್ತಿ ಹಿಡಿಯುವ ಲೇಖನಗಳನ್ನು ಬರೆಯುತ್ತಿದ್ದರು. ಆ ಕಾಲದಲ್ಲಿ ವಿದ್ಯಾಧಿಕಾರಿಗಳಾಗಿದ್ದ ಸಿ.ರಾಮಲಿಂಗರೆಡ್ಡಿ ಅವರು ಪರೋಕ್ಷವಾಗಿ ಮಂಡಳಿಗೆ ಬೆಂಬಲ ನೀಡುತ್ತಿದ್ದರು. ಇವರ ಅಧಿಕಾರಾವಧಿಯಲ್ಲಿ ಕೋಮುವಾರು ಜಿಜ್ಞಾಸೆಯೂ ಮುಗಿಲು ಮುಟ್ಟಿತೆಂದು ಗೊತ್ತಾಗುತ್ತದೆ. ಮತ್ತೊಂದು ಗಮನಾರ್ಹ ಸಂಗತಿಯೆಂದರೆ, ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರರ ಪೂರ್ಣ ಪ್ರೋತ್ಸಾಹ, ಬೆಂಬಲವೂ ಮಂಡಳಿಯ ಪರವಾಗಿತ್ತು.

ಬ್ರಾಹ್ಮಣ ಮುಖಂಡರೂ, ರಾಷ್ಟ್ರೀಯವಾದಿಗಳು ಆದ ಎಂ.ವೆಂಕಟಕೃಷ್ಣಯ್ಯನವರು ಗಣ್ಯರು, ಉದಾರವಾದಿಗಳು. ಆದರೆ, ನ್ಯಾಯ ವಿಧಾಯಕ ಸಭೆಯಲ್ಲೂ, ಪ್ರಜಾ ಪ್ರತಿನಿಧಿ ಸಭೆಯಲ್ಲೂ ಬ್ರಾಹ್ಮಣರ ಕುರಿತು ಉದ್ವೇಗಕರವಾದ, ಹೀನಾಯವಾದ ಮಾತುಗಳು ಮಂಡಲಿಯ ನಾಯಕರಿಂದ ಬಂದಾಗ ಅದಕ್ಕೆ ಎದುರು ಉತ್ತರಗಳೂ ಇವರಿಂದ ಬರುತ್ತಿದ್ದವು. ಅಂದಿನ ವಾದವಿವಾದಗಳು, ಆರೋಪ–ಪ್ರತ್ಯಾರೋಪಗಳ ಪರಿಚಯ ಆಗಬೇಕಾದರೆ ಅಂದಿನ ಶಾಸನಸಭೆಗಳ ನಡವಳಿಗಳ ವರದಿಯ ಕಡತ ವನ್ನು ಓದಬೇಕು.

ಪ್ರಜಾ ಪ್ರತಿನಿಧಿ ಸಭೆಯ ದಸರಾ ಅಧಿವೇಶನದ ಮೊದಲ ದಿನವೇ ರಾಜದ್ರೋಹಕರವಾದ ಭಾಷಣ ಮಾಡಿದ್ದರೆಂಬ ನೆಪದ ಮೇಲೆ ಮಧ್ಯರಾತ್ರಿಯಲ್ಲಿ ಕಾಂಗ್ರೆಸ್ ಮುಖಂಡ ಭಾಷ್ಯಂ ಮತ್ತು ತಿಮ್ಮಾರೆಡ್ಡಿ ಅವರನ್ನು ಬಂಧಿಸಲಾಯಿತು. ವಾತಾವರಣ ಪ್ರಕ್ಷುಬ್ಧವಾಯಿತು. ಆಳುವವರ ದಬ್ಬಾಳಿಕೆಯನ್ನು ಎದುರಿಸಲು ರಾಷ್ಟ್ರೀಯ ಭಾವನೆ ಇರುವವರೆಲ್ಲ ಒಗ್ಗಟ್ಟಾಗುವುದು ಅನಿವಾರ್ಯವೆಂಬ



ನಿರ್ಣಯಕ್ಕೆ ಎಲ್ಲರೂ ಬರುವಂತಾಯಿತು. ದೀರ್ಘ ವಿಚಾರ ವಿನಿಮಯದ ನಂತರ ಪ್ರಜಾ ಸಂಯುಕ್ತ ಪಕ್ಷವು ಕಾಂಗ್ರೆಸ್ಸಿನೊಂದಿಗೆ ಒಂದಾಗಲು ಒಪ್ಪಿತು. ಆದರೆ ಎಸ್.ಪಿ.ಮಲ್ಲಯ್ಯ, ಎಂ.ಸಿ.ಲಿಂಗೇಗೌಡ, ನೀಲಗಿರಿ ಸಂಜೀವಯ್ಯ ಮತ್ತು ಒಬ್ಬಿಬ್ಬರು ವಿಲೀನಕ್ಕೆ ವಿರೋಧವಾಗಿ ಹೊರಗೇ ಉಳಿದರು. ಸದಾ ಪ್ರಗತಿಪರ ಭಾವನೆಯಿಂದ ವರ್ತಿಸುತ್ತಿದ್ದ ಬಿ.ಎಲ್.ಬೈಯಣ್ಣ ತಟಸ್ಥರಾದರು, ಕಾಂಗ್ರೆಸ್ಸಿಗೆ ಸೇರಲಿಲ್ಲ. ಮೇಲೆ ಹೇಳಿದ ಮೂವರೂ ತಮ್ಮ ಜೀವನಪರ್ಯಂತ ಯಾವುದೇ ಪಕ್ಷ ಸೇರದೆ ಉಳಿದುದು ಅವರ ದೃಢ ನಿರ್ಧಾರದ ಸಂಕೇತ.

ಈ ಸಂದರ್ಭದಲ್ಲಿ ಅಸಾಧಾರಣ ಪಾತ್ರವನ್ನು ವಹಿಸಿದವರೆಂದರೆ ಬಿ.ಎನ್.ಗುಪ್ತರು. ಮದ್ರಾಸಿನ ಜಸ್ಟಿಸ್ ಪಕ್ಷ ಮತ್ತು 'ಜಸ್ಟೀಸ್' ಪತ್ರಿಕೆಯ ನಿಕಟ ಸಂಪರ್ಕ ಹೊಂದಿದ್ದು ಅಲ್ಲಿನ ನಾಯಕರ ವಿಶ್ವಾಸ ಗಳಿಸಿದ್ದ ಅವರು, ಆ ಪಕ್ಷದ ರೀತಿ ನೀತಿಗಳ ಬಗ್ಗೆ ಕಳಕಳಿ ಹೊಂದಿದವರಾಗಿದ್ದು ಬೆಂಗಳೂರಿಗೆ ಬಂದು ನೆಲೆಸಿದರು. ಪ್ರಜಾಮಿತ್ರ ಮಂಡಳಿಯ ನಾಯಕರ ಒಲವನ್ನು ಅವರು ಪಡೆದುದು ಅಚ್ಚರಿಯ ವಿಷಯವಲ್ಲ. ಮಂಡಲಿಯ ಅಂತರಂಗದ ಮಿತ್ರರೂ, ಮಾರ್ಗದರ್ಶಿಯೂ ಅವರಾದರು. ಕಡೆಗೆ ಅದು ಅಂತರ್ಧಾನಗೊಳ್ಳಲೂ ಅವರು ಸಹಾಯಕರಾದರು. ಅವರ ರಾಜಕೀಯವು ಆಡಳಿತದ ಅವಕೃಪೆಗೆ ಗುರಿಯಾಗಿ, ಅವರು ಅಪಾರ ಕಷ್ಟ ನಷ್ಟ ಅನುಭವಿಸಬೇಕಾಯಿತು. ಕಡೆಗೆ, ಇಲ್ಲಿಂದ ಗಡಿಪಾರಾದ ಅವರು, ಮದ್ರಾಸು ಹಾಗೂ ಹುಬ್ಬಳ್ಳಿಗಳಿಂದ ತಮ್ಮ ಪತ್ರಿಕೆಯನ್ನು ಹೊರಡಿಸಿ ಆಡಳಿತಗಾರರನ್ನು ಟೀಕಿಸುತ್ತಿದ್ದರು. ಗಡೀಪಾರು ಆಜ್ಞೆ ಮುಗಿದು ಹೋದ ತರುವಾಯ ಸಂಸ್ಥಾನಕ್ಕೆ ಮರಳಿ ಅಲ್ಲಿನ ರಾಜಕೀಯದಲ್ಲಿ ವೈಶಿಷ್ಟ್ಯಮಯ ಪಾತ್ರ ನಿರ್ವಹಿಸಿದರು. ಪ್ರಜಾ ಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದು ದಕ್ಷತೆಯಿಂದ ತಮ್ಮತಮ್ಮ ಜವಾಬ್ದಾರಿಯನ್ನು ಪಾಲಿಸಿದರು.

ಅಂತೂ ಪ್ರಜಾಮಿತ್ರ ಮಂಡಳಿಯ ಸಾಧನೆ ಸಣ್ಣದಲ್ಲ. ಹಿಂದುಳಿದ ವರ್ಗಗಳಲ್ಲಿ ಜಾಗೃತಿ ಉಂಟುಮಾಡಿದ್ದಲ್ಲದೆ, ಮುಂದೆ ಪ್ರಜಾಸತ್ತೆಗೆ ಬದ್ಧರಾದ ಕೆಲ ಗಣ್ಯ ನಾಯಕರನ್ನು ಸಂಸ್ಥಾನಕ್ಕೆ ಒದಗಿಸಿಕೊಟ್ಟ ಕೀರ್ತಿ ಅದಕ್ಕಿದೆ.

## ಸಂಸ್ಥಾನದಲ್ಲಿ ಪತ್ರಿಕೆಗಳ ಪ್ರಭಾವ

೧೮೮೫ ರಿಂದ ೧೯೧೫ ರ ಅವಧಿಯಲ್ಲಿ ಸಂಸ್ಥಾನದಲ್ಲಿ 'ಕರ್ನಾಟಕ ಪ್ರಕಾಶಿಕಾ', 'ವೃತ್ತಾಂತ ಚಿಂತಾಮಣಿ', 'ವೃತ್ತಾಂತ ಪತ್ರಿಕೆ', 'ವೃತ್ತಾಂತ ಬೋಧಿನಿ', 'ಭಾರತಿ', 'ಮೈಸೂರು ಸ್ಟಾರ್', 'ಸೂರ್ಯೋದಯ', 'ನಡೆಗನ್ನಡಿ', 'ಜಗದ್ಗುರು', 'ಸಾಧ್ವಿ', 'ಧನುರ್ಧಾರಿ', 'ಒಕ್ಕಲಿಗರ ಪತ್ರಿಕೆ', 'ಸಂಪದಭ್ಯುದಯ', ಮುಂತಾದವು ಜನಜಾಗೃತಿಗೆ ಕಾರಣವಾದ ದಿನಪತ್ರಿಕೆಗಳು. ಇವುಗಳಲ್ಲಿ ಎಲ್ಲವೂ ರಾಷ್ಟ್ರೀಯವಾದಿ ಪತ್ರಿಕೆಗಳಲ್ಲವಾದರೂ, ಅವುಗಳಲ್ಲಿನ ಸುದ್ದಿ ಸಮಾಚಾರದಿಂದ ಜನರು ಪ್ರಭಾವಿತರಾಗುತ್ತಿದ್ದುದು ನಿರ್ವಿವಾದ.

ಮಹಾತ್ಮರ ದಂಡಿಯಾತ್ರೆಯ ದಿನಗಳಿಂದಲೂ ಬಿ.ಎಂ.ಸೀನಪ್ಪನವರು ಖಾದಿ ತೊಡುತ್ತಿದ್ದರು. ೧೯೩೫ ರಲ್ಲಿ ಡಾ॥ ಹರ್ಡೀಕರ್ ಅವರು ಜಿ.ರಾಮಸ್ವಾಮಿಯವರ ಜೊತೆ ಸೀನಪ್ಪನವರ ಮನೆಗೆ ಹೋಗಿ ಕಾಂಗ್ರೆಸ್ ಸೇರಲು ಹೇಳಿದಾಗ ಅವರು ಕಾಂಗ್ರೆಸ್ ಸದಸ್ಯರಾದರು. ಬೆಂಗಳೂರಿನಲ್ಲಿರುವ ಕಾಲೇಜು ವಿದ್ಯಾರ್ಥಿಗಳನ್ನು ಕಾಂಗ್ರೆಸ್‌ಗೆ ಸೇರಿಸುವ ಅವರ ಪ್ರಯತ್ನ ಶ್ಲಾಘನೀಯ.

೧೫–೭–೩೭ ರಂದು ದಿವಾನ್ ಮಿರ್ಜಾರವರು ಕ್ಲೋಸ್ ಪೇಟೆಯ ಪುರಸಭೆಯವರು ನೀಡಿದ ಒಂದು ಭಿನ್ನವತ್ತಳೆಗೆ ಉತ್ತರ ನೀಡುತ್ತಾ, ಸಂಸ್ಥಾನದಲ್ಲಿ ಚಳುವಳಿ ನಡೆಸುತ್ತಿರುವ ನಾಯಕರನ್ನು ಕಾರ್ಯಕರ್ತರನ್ನು ಹೀಯಾಳಿಸಿ ಮಾತನಾಡಿದರು. ಜನರಲ್ಲಿ ಅತೃಪ್ತಿ ಉಂಟು ಮಾಡಿ, ಸಂಸ್ಥಾನದಲ್ಲಿ ಗೊಂದಲ ಉಂಟುಮಾಡಿ ಹೆಸರು ಗಳಿಸಬೇಕೆಂಬುದೇ ಈ ಹೋರಾಟಗಾರರ ಉದ್ದೇಶ ಎಂದು ಹೀಯಾಳಿಸಿದ್ದರು. ಇದು ಮರುದಿನದ ಪತ್ರಿಕೆಯಲ್ಲಿ ಪ್ರಕಟವಾದ ತಕ್ಷಣ, ಜನಜಾಗೃತಿ ಸಂಘದ ರಾಜ್ಯ ಸಮಿತಿ ಸಭೆ ಕರೆದು ಮಿರ್ಜಾರವರ ಭಾಷಣವನ್ನು ಖಂಡಿಸಲಾಯಿತು. ಜನಜಾಗೃತಿ ಸಂಘದ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಸಭೆಗಳನ್ನು ಏರ್ಪಡಿಸಿ ಮಿರ್ಜಾರವರ ಭಾಷಣವನ್ನು ಖಂಡಿಸಲಾಯಿತು.

ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರೂ, ಕೆಲಕಾಲ ರಾಜ್ಯಪಾಲರೂ, ಕೇಂದ್ರ ವಿಜಿಲೆನ್ಸ್ ಕಮಿಷನ್ ಪ್ರಧಾನರು ಆಗಿದ್ದ ನಿಟ್ಟೂರು ಶ್ರೀನಿವಾಸರಾವ್ ಅವರ ಕಥನ ಈ ಸಂದರ್ಭಕ್ಕೆ ಉಚಿತ.



ನಿಟ್ಟೂರು ಶ್ರೀನಿವಾಸರಾಯರ ತಂದೆಯವರು ಚಳ್ಳಕೆರೆಯ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಅವರು ಸ್ವತಃ ರಾಷ್ಟ್ರವಾದಿಗಳಾಗಿದ್ದು ಅವರ ವ್ಯಕ್ತಿತ್ವವು ಶ್ರೀನಿವಾಸರಾಯರ ಮೇಲೆ ವಿಶೇಷ ಪ್ರಭಾವ ಬೀರಿದ್ದಿತು. ಆ ಕಾಲದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು ಅವರ ಮೇಲೆ ವಿಶೇಷ ಪ್ರಭಾವ ಬೀರಿದ್ದವು. ರಾಜಾರಾಮೋಹನರಾಯ್ ಅಲ್ಲದೆ ವೀರೇಶಲಿಂಗಂ ಪಂತುಲು ಹಾಗೂ ಮದ್ರಾಸಿನ ವೆಂಕಟ ಸುಬ್ಬರಾವ್ ಅವರ ಬರಹಗಳು ಅವರ ಮೇಲೆ ಪರಿಣಾಮ ಉಂಟು ಮಾಡಿದವು. ಆಗ ಸೌಟ್ ಕಮೀಷನರ್ ಆಗಿದ್ದ ಸಿ.ಸುಬ್ಬರಾವ್ ಅವರು ರಾಷ್ಟ್ರವಾದಿಗಳಾಗಿದ್ದು, ಅವರ ಪ್ರಭಾವವೇನೂ ಕಡಿಮೆ ಇರಲಿಲ್ಲ. ಆ ಕಾಲದಲ್ಲಿ ದಕ್ಷಿಣ ಆಫ್ರಿಕಾದ ಕಾಟಿಯವಾಡಕ್ಕೆ ಮರಳಿದ್ದ ಗಾಂಧೀಜಿಯವರು ಬಂಡಿಯೊಂದರಲ್ಲಿ ಪ್ರಯಾಣ ಮಾಡುತ್ತಿರಲು, ಬಂಡಿಯವನು ಎತ್ತಿಗೆ ಹೊಡೆಯುತ್ತಿರಲು ಹಾಗೆ ಮಾಡಬೇಡ ಎಂದರೂ ಆತ ಕೇಳದಾಗ ಗಾಂಧೀಜಿಯವರು ಬಂಡಿಯಿಂದ ಇಳಿದು ನಡೆದುಕೊಂಡೇ ಹೋದರು, ಎಂಬ ವಾರ್ತೆಯೊಂದು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ಗಾಂಧೀಜಿಯವರ ಈ ವರ್ತನೆಯು ಅವರ ಮೇಲೆ ಪ್ರಭಾವ ಬೀರಿತು. ಚಳ್ಳಕೆರೆಯ ಅಮಲ್ದಾರರ ಮಗನೊಬ್ಬ ಮುಂಬಯಿಯಲ್ಲಿ ಓದುತ್ತಿದ್ದು, ರಜಾದಿನದಲ್ಲಿ ಊರಿಗೆ ಬಂದಾಗ ತಿಲಕರ ಚಟುವಟಿಕೆಗಳ ವಿಚಾರ ಹೇಳಿದ್ದನಲ್ಲದೆ, 'ಕೇಸರಿ' ಪತ್ರಿಕೆಯ ಕೆಲ ಅಂಕಣಗಳನ್ನು ತಂದು ಅವರಿಗೆ ಓದಿ ಹೇಳಿದ್ದ.

ಹೈಸ್ಕೂಲು ಶಿಕ್ಷಣಕ್ಕಾಗಿ ಅವರು ಶಿವಮೊಗ್ಗಕ್ಕೆ ಹೋದರು. ಅಲ್ಲಿ ಎಂ.ಆರ್.ಶ್ರೀನಿವಾಸಮೂರ್ತಿಗಳು, ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಅವರ ಅಧ್ಯಾಪಕರುಗಳ ಪ್ರಭಾವದಿಂದಾಗಿ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಪಾಲ್ಗೊಂಡರು. ಭಾಷಾಭಿಮಾನವು ಬೆಳೆಯಿತು. ಶಿವಮೊಗ್ಗದಲ್ಲಿದ್ದಾಗ ತಿಲಕರ 'ಮರಾಠಾ' ಹಾಗೂ ಹಾಸ್ಟೆಲ್‌ಗೆ ಬರುತ್ತಿದ್ದ ಡಿವಿಜಿಯವರ 'ಕರ್ನಾಟಕ ಪತ್ರಿಕೆ' ಓದುತ್ತಿದ್ದರು. ಅದೇ ಕಾಲಕ್ಕೆ ಶಿವಮೊಗ್ಗಕ್ಕೆ ಬಂದ ಡಿ.ಕೆ.ಕರ್ವೆಯವರು ಹೈಸ್ಕೂಲಿನಲ್ಲಿ ಭಾಷಣ ಮಾಡುತ್ತಾ, ತಿಲಕರಿಗೆ ಒಮ್ಮೆ ಬ್ರಿಟಿಷ್ ಸರ್ಕಾರವು ದಂಡ ವಿಧಿಸಿದ ಪ್ರಸಂಗದಲ್ಲಿ, ಅವರಿಗೆ ಹಣ ಕೂಡಿಸಿಕೊಡಲು ಪುಣೆಯ ವಿದ್ಯಾರ್ಥಿಗಳು ನಾಟಕದಲ್ಲಿ ಅಭಿನಯಿಸಿದರೆಂದು, ಸ್ವತಃ ಗೋಖಲೆಯವರು

ಅದರಲ್ಲಿ ಭಾಗವಹಿಸಿದರೆಂದು ಹೇಳಿದ ಸಂಗತಿಯಿಂದ ಉಭಯ ನಾಯಕರ ಬಗೆಗೆ ಅವರಿಗೆ ಅಪಾರ ಗೌರವ ಮೂಡಿಸಿತು.

೧೯೧೯ ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಅಮೆಚೂರ್ ಡ್ರಾಮಾ ಆರ್ಟಿಸ್ಟ್ ಅಸೋಸಿಯೇಷನ್‌ರವರ ಲಲಿತ ಕಲೆಗಳ ಉತ್ಸವ ನಡೆದಾಗ, ರವೀಂದ್ರನಾಥ ಠಾಕೂರರು ಬಂದಿರಲಾಗಿ ಅವರನ್ನು ಕಾಣಲು ಶ್ರೀನಿವಾಸರಾಯರು ಉತ್ಸಾಹದಿಂದ ಬೆಂಗಳೂರಿಗೆ ಹೋಗಿದ್ದರು. ಆಗಲೇ 'ಕರ್ನಾಟಕ ಪತ್ರಿಕೆ' ಮುದ್ರಣವಾಗುವ ಕೆ.ಎಸ್.ಕೃಷ್ಣಯ್ಯರ್ ಪ್ರೆಸ್ ಕೂಡ ಕಂಡು ತೆರಳಿದ್ದರು. ೧೯೨೦ ರಲ್ಲಿ ನಾಗಪುರ ಕಾಂಗ್ರೆಸ್ಸಿಗೂ ಹೋಗಿ ಗಾಂದೀಜಿಯವರ ದರ್ಶನ ಪಡೆದರು.

ಆ ಕಾಲದಲ್ಲಿ ಸಂಸ್ಥಾನದ ಕೆಲವು ಗಣ್ಯ ನಾಯಕರು ಸ್ವಾತಂತ್ರ್ಯ ಚಳುವಳಿ ಸಾರ್ವಜನಿಕ ಸೇವೆಯ ವಾತಾವರಣ ಸೃಷ್ಟಿಗೆ ದುಡಿದಿದ್ದರು. ಶಿವಮೊಗ್ಗದಲ್ಲಿ ವಕೀಲರಾಗಿದ್ದ ಶಂಕರನಾರಾಯಣರಾವ್, ಟಿ.ವೆಂಕಟ ಸುಬ್ಬಾಶಾಸ್ತ್ರಿ, ಚಿತ್ರದುರ್ಗದ ಜಿ.ಬಿ.ವೆಂಕಟರಾಮಣ್ಣ, ಚಿಕ್ಕಮಗಳೂರಿನ ಪ್ಲಾಂಟರ್ ಶ್ರೀನಿವಾಸರಾವ್, ಎಸ್.ಬಾಲಕೃಷ್ಣರಾವ್, ಎನ್.ಎಸ್.ನಂಜುಂಡಯ್ಯ ಅಂತಹವರಲ್ಲಿ ಕೆಲ ಗಣ್ಯರು. ಶಿವಮೊಗ್ಗದಲ್ಲಿ ಎಸ್.ವಿ.ಕೃಷ್ಣಮೂರ್ತಿರಾವ್ ಅವರ ಸಹಪಾಠಿಗಳು. ಮುಂದೆ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಸೇರಿದಾಗ ಎಸ್.ನಿಜಲಿಂಗಪ್ಪ ಅವರ ಸಹಪಾಠಿಯಾದರು. ಪ್ರೊಫೆಸರ್ ಕೆ ಸಂಪದ್ಗಿರಿರಾವ್ ಅಲ್ಲಿ ಕೆಲಕಾಲ ಅವರ ಅಧ್ಯಾಪಕರಾಗಿದ್ದರು.

ಬೆಂಗಳೂರಿಗೆ ಆ ಕಾಲಕ್ಕೆ ಭೇಟಿ ನೀಡಿದ ಎಲ್ಲ ಗಣ್ಯ ನಾಯಕರ ಭಾಷಣಗಳನ್ನು ಅವರು ಕೇಳಿದ್ದರು. ಕೃಷ್ಣರಾವ್ ಮುದವೀಡಕರ್, ಗೋಪಾಲರಾವ್ ಗುತ್ತಲ, ಗಾನಾಲ ರಾಮಮೂರ್ತಿ, ಸತ್ಯಮೂರ್ತಿ, ರಾಜಾಜಿ ಅವರೆಲ್ಲರೂ ಇಲ್ಲಿ ಉಲ್ಲೇಖನೀಯರು. ೧೯೨೪ ರಿಂದ ೨೭ ರವರೆಗೆ ಅವರು ಕಾನೂನು ಶಿಕ್ಷಣ ಪಡೆದರು. ಮಧ್ಯದಲ್ಲಿ ಒಂದು ವರ್ಷ ಅನಾರೋಗ್ಯದಿಂದ ಬೆಂಗಳೂರಿಗೆ ಮರಳಿ, ನ್ಯಾಷನಲ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. ಕಾನೂನು ಶಿಕ್ಷಣ ಮುಗಿದ ನಂತರವೂ ಅಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.



೧೯೨೧ ರಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್ ಸಮಿತಿ ಒಂದು ಜಿಲ್ಲಾ ಸಮಿತಿಯಾಗಿ ಸಂಘಟಿತವಾಯಿತು. ಅದಕ್ಕೆ ಸೆಟ್ಲೂರರು ಅಧ್ಯಕ್ಷರು. ಅವರು ಮುಂಬೈಯಲ್ಲಿ ವಕೀಲರೂ, ತಿಲಕರ ನಿಕಟ ಮಿತ್ರರೂ ಆಗಿದ್ದು, ಒಂದು ವರ್ಷ ಸಂಸ್ಥಾನದಲ್ಲಿ ಹೈಕೋರ್ಟ್ ನ್ಯಾಯಾಧೀಶರು ಆಗಿದ್ದರು. ಬೆಂಗಳೂರಿನಲ್ಲಿ ಇದ್ದ ಜಮೀನ್ದಾರ್ ಬಿ.ಎಲ್.ಬಯ್ಯಣ್ಣನವರು ಕಾಂಗ್ರೆಸ್ಸಿನ ಪರವಾಗಿ ಇದ್ದ ಗಣ್ಯರು.

ಶ್ರೀನಿವಾಸರಾಯರು ಬೆಂಗಳೂರಿನಲ್ಲಿ ಪ್ರಾಕ್ಟೀಸ್ ಆರಂಭಿಸಿದ ಮರುವರ್ಷವೇ ಗಣಪತಿ ಗಲಾಟೆ ನಡೆಯಿತು. ಸಂಸ್ಥಾನದಲ್ಲಿ ಜನಜಾಗೃತಿ ತೀವ್ರವಾಗಿಆದುದು ಆಗಿನಿಂದಲೇ. ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯ ಪ್ರಾಥಮಿಕ ಶಾಲೆಯಲ್ಲಿನ ಗಣಪತಿ ಪ್ರಕರಣದಲ್ಲಿ ವಿದ್ಯಾರ್ಥಿಗಳ ಪರವಾಗಿ ನಿಂತ ಗಣ್ಯ ಕಾರ್ಯಕರ್ತರಾದ ಎಚ್.ವಿ.ಸುಬ್ರಹ್ಮಣ್ಯಂ, ರಾಮಲಾಲ್ ತಿವಾರಿ, ಜಮಖಂಡಿ ಭೀಮರಾವ್ ಅವರುಗಳ ಬಂಧನವಾಯಿತು. ಕ್ರುದ್ಧರಾದ ಜನ ಸೆಂಟ್ರಲ್ ಜೈಲ್ ಕಡೆ ದೌಡುಮಾಡಿ ಪ್ರತಿಭಟಿಸಿದರು. ಚಿಕ್ಕಪೇಟೆ, ದೊಡ್ಡಪೇಟೆ, ಪ್ಯಾಲೇಸ್ ರಸ್ತೆಗಳು ಜನರಿಂದ ತುಂಬಿಹೋಗಿದ್ದವು. ಕಡೆಗೆ, ಅವರುಗಳ ಬಿಡುಗಡೆ ಆದಾಗ ಅವರನ್ನು ಮೆರವಣಿಗೆಯಲ್ಲಿ ತಂದು ಶಾಲೆಯಲ್ಲಿ ಗಣೇಶನಿಗೆ ಆರತಿ ಮಾಡುತ್ತಿರಲು ಅಬ್ಬಾಸ್‌ಖಾನರ ಮನೆಯಿಂದ ಗುಂಡು ಹಾರಿತು (೩೦–೭–೧೯೨೮). ಅದು ಗಲಭೆಗೆ ನಾಂದಿ. ಮರುದಿನ ೧೪೪ ನೆಯ ಸೆಕ್ಷನ್ ಜಾರಿಯಾಗಿ ಮಿಲಿಟರಿಯನ್ನು ಕರೆಸಲಾಯಿತು. ಎಲ್ಲಾ ಪತ್ರಿಕೆಗಳ ಮೇಲೆ ಪ್ರತಿಬಂಧ ಹೇರಿಲಾಯಿತು. ಸರ್ಕಾರವು ನೀಡಿದ ವರದಿಗಳನ್ನು ಮಾತ್ರ ಆಧರಿಸಿ ಸಂಸ್ಥಾನದ ಹೊರಗಿನ ಪತ್ರಿಕೆಗಳು ಘಟನೆಯ ವಿವರ ನೀಡಿದವು. 'ದಿ ಹಿಂದೂ' ಪತ್ರಿಕೆ ಪ್ರಕಟಿಸಿದ್ದು ಪತ್ರಿಕಾ ಪ್ರತಿನಿಧಿಗೆ ಸಂಸ್ಥಾನದ ದಿವಾನರು ನೀಡಿದ್ದ ಹೇಳಿಕೆಯನ್ನಷ್ಟೇ. ಒಂದು ಕಡೆ ಜನರ ಸ್ವಾತಂತ್ರ್ಯದ ದಮನ, ಇನ್ನೊಂದೆಡೆ ವಾರ್ತೆಗಳು ಪ್ರಕಟವಾಗದಂತೆ ಹಾಕಿದ ದಿಗ್ಬಂಧನ. ಜೊತೆಗೆ, ಪೊಲೀಸರ ಮಿಲಿಟರಿ ದಬ್ಬಾಳಿಕೆ. ಇವುಗಳಿಂದ ಜನರಿಗೆ ತಮ್ಮ ನಿಸ್ಸಹಾಯಕ ಸ್ಥಿತಿಯ ಅರಿವಾಯಿತು. ಟಿ.ಪ್ರಕಾಶರ 'ಸ್ವರಾಜ್ಯ' ಒಂದೇ ಸರಿಯಾದ ವರದಿ ಪ್ರಕಟಿಸಿ ನೆರವಾಯಿತು. ಅದರಲ್ಲಿ ಸತ್ಯವಾದ ವಿವರಗಳು ಬೆಳಕು ಕಂಡು ಚಳುವಳಿ ತೀವ್ರವಾದ ನಂತರವೇ ವಿಚಾರಣಾ ಸಮಿತಿ ನೇಮಕವಾದದ್ದು.

ಆ ಕಾಲದಲ್ಲಿ ಬ್ರಾಹ್ಮಣರನ್ನು ತೀವ್ರವಾಗಿ ಆಕ್ಷೇಪಿಸಿ ಒಂದು ಪ್ರಚಾರ ಚಳುವಳಿ ಕೂಡ ಆರಂಭವಾಯಿತು. ಮಹಾರಾಜರನ್ನು ಪದಚ್ಯುತಗೊಳಿಸಲು ಬ್ರಾಹ್ಮಣರು ನಡೆಸಿದ ಪಿತೂರಿಯೇ ಎಂದು ಚಳುವಳಿಯ ಬಗ್ಗೆ ವ್ಯಾಖ್ಯಾನ ಮಾಡಿ ಅಬ್ಬಾಸ್ ಖಾನ್ ಮುಂತಾದವರು 'ಮೈಸೂರು ಸ್ಟಾರ್'ನಲ್ಲಿ ಪ್ರಚಾರ ಮಾಡಿದರು. ಸರ್ ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಅವರ ನೀತಿಗಳನ್ನು ಖಂಡಿಸಿ ಟಿ.ಪರಮಶಿವ ಅಯ್ಯರ್ ಮುಂತಾದವರು ಬರೆಯುತ್ತಿದ್ದ ಲೇಖನಗಳೆಲ್ಲ ಬ್ರಾಹ್ಮಣರು ಮಹಾರಾಜರನ್ನು ಗುರಿಯಾಗಿಟ್ಟುಕೊಂಡು ಕೊಟ್ಟ ಮುಸುಕಿನ ಗುದ್ದುಗಳೆಂದು, ವಿಶ್ವೇಶ್ವರಯ್ಯನವರ ಪ್ರಗತಿಪರ ಧೋರಣೆಯಿಂದ ಮಹಾರಾಜರು ಜನಪ್ರಿಯರಾಗುವುದನ್ನು ತಡೆಯುವುದೇ ಇದರ ಉದ್ದೇಶವೆಂದು ಹಿಂದಿನ ಘಟನೆಗಳನ್ನು ವ್ಯಾಖ್ಯಾನಿಸಲಾಯಿತು.

ಜನರ ಸ್ವಾತಂತ್ರ್ಯಗಳ ದಮನ ಮಾಡಿದ ಆ ಘಟನೆಯ ವಾರ್ಷಿಕೋತ್ಸವ ನಡೆಸಬೇಕೆಂದು ಡಿವಿಜಿ ಯವರು ಸೂಚಿಸಿದಂತೆ ೩೦–೭–೧೯೨೯ ರಂದು ಹರತಾಳ ಆಚರಿಸಲು ಮನವಿಮಾಡಿ ಒಂದುಮನವಿ ಪತ್ರವನ್ನು ಶ್ರೀನಿವಾಸರಾಯರು ಸಿದ್ಧಪಡಿಸಿದರು. ಡಿವಿಜಿ ಅದನ್ನು ತಿದ್ದಿದರು ಶ್ರೀನಿವಾಸರಾಯರು ಡಿವಿಜಿ, ನೆಟ್ಟಕಲ್ಲಪ್ಪ, ಪಾಮಡಿ ಸುಬ್ಬರಾಮಶೆಟ್ಟಿ, ಹೀಗೆ ಅನೇಕ ಗಣ್ಯ ನಾಗರಿಕರು ಆ ಮನವಿಗೆ ಸಹಿ ಹಾಕಿದ್ದರು.

೩೦–೯–೧೯೨೯ ರಂದು ಮತ್ತೆ ಪೊಲೀಸ್ ಅಧಿಕಾರಿಯೊಬ್ಬರ ಪ್ರಚೋದನೆಯಿಂದಲೇ ಗಲಭೆ ಆಯಿತು. ಆ ಬಗ್ಗೆ 'ನವಜೀವನ' ಪತ್ರಿಕೆಯಲ್ಲಿ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ಬರೆದ ಒಂದು ಲೇಖನಕ್ಕಾಗಿ (ಮಿರ್ಜಾರನ್ನು ಕಾಡಾನೆಗೆ ಹೋಲಿಸಿ ಬರೆಯಲಾಗಿತ್ತು) ಸಂಪಾದಕ ಸಿ.ಅಶ್ವತ್ಥನಾರಾಯಣ ರಾಯರಿಗೂ ವೀರಕೇಸರಿಯವರಿಗೂ ಸೆಕ್ಷನ್ ೧೨೪(ಎ) ಯಂತೆ ತಲಾ ೯ ತಿಂಗಳು ಶಿಕ್ಷೆ ಆಯಿತು. ಅದು ರಾಜದ್ರೋಹಕ್ಕಾಗಿ ಶಿಕ್ಷೆಯಾದ ಸಂಸ್ಥಾನದಲ್ಲಿನ ಪ್ರಥಮ ಪ್ರಕರಣ. 'ವೀರಕೇಸರಿ' ಪತ್ರಿಕೆ ಆಗ ಕೆಲ ಕಾಲ ನಿಂತಿದ್ದರಿಂದ ಶಾಸ್ತ್ರಿಗಳು 'ನವಜೀವನ' ಪತ್ರಿಕೆಯಲ್ಲಿ ಲೇಖನ ಬರೆದಿದ್ದರು. ಇತರ ಅನೇಕರ ಮೇಲೂ ದೊಂಬಿ ಮಾಡಿದ ಆಪಾದನೆಗಾಗಿ ಕಟ್ಲೆ ಆಗಲು, ಆಪಾದಿತರ ಪರವಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟ್ ಹಾಗೂ ಹೈ



ಕೋರ್ಟಿನಲ್ಲಿ ಶ್ರೀನಿವಾಸರಾವ್, ಸಿ.ವಿ. ನರಸಿಂಹ ಅಯ್ಯಂಗಾರ್, ಎಂ.ಪಿ.ಸೋಮಶೇಖರರಾವ್, ಸಂಪಿಗೆ ವೆಂಕಟಪತಯ್ಯ, ಕಂದಾಡೆ ಶಾಮಣ್ಣ ಮುಂತಾದವರು ವಕಾಲತ್ ಮಾಡಿದರು. ವಿಶ್ವೇಶ್ವರಯ್ಯ ಸಮಿತಿಯ ವಿಚಾರಣೆಯ ಕಾಲಕ್ಕೂ ಶ್ರೀನಿವಾಸರಾಯರು ವಕೀಲರಾಗಿ ನೆರವು ನೀಡಿದ್ದರು.

೧೯೨೮ ರಲ್ಲಿ ವಿದ್ಯಾರ್ಥಿಗಳ ನಾಯಕತ್ವ ವಹಿಸಿದ್ದ ಮೂವರು ನಾಯಕರೂ ಸಾರ್ವಜನಿಕ ರಂಗದಲ್ಲಿ ಬಹುಕಾಲ ದುಡಿದಿದ್ದವರು. ಜಮಖಂಡಿ ಭೀಮರಾಯರು ಸುಗಂಧ ದ್ರವ್ಯಗಳ ವ್ಯಾಪಾರಿ; ರಾಮಲಾಲ್ ತಿವಾರಿ ಮಿಠಾಯಿ ವ್ಯಾಪಾರಿ; ಎಚ್.ವಿ.ಸುಬ್ರಮಣ್ಯಂ ಮೈಸೂರು ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿ (ಎಚ್.ವಿ.ನಂಜುಂಡಯ್ಯನವರ ಮಗ) ಹಾಗೂ ಗಣ್ಯ ಜಮೀನುದಾರ. ಮೂವರೂ ಅನುಕೂಲವಂತರು. ಅವರೆಲ್ಲರೂ ಸಾರ್ವಜನಿಕ ಸೇವೆಯಲ್ಲಿ ಅಪಾರ ಶ್ರದ್ಧೆಯುಳ್ಳ ರಾಷ್ಟ್ರೀಯವಾದಿಗಳು.

೧೯೨೮–೨೯ರ ಘಟನೆಗಳಿಂದ ಹಿಂದೂ ಮುಸ್ಲಿಂ ಸೌಹಾರ್ದ ಕದಡಿತು. ೧೯೨೯ ರಲ್ಲಿ ದಾವಣಗೆರೆಯಲ್ಲಿಯೂ ಜಾತೀಯ ಗಲಭೆ ಆಯಿತು. ಆದರೆ ನಾಗರಿಕ ಸ್ವಾತಂತ್ರ್ಯಗಳ ಬಗ್ಗೆ ಅಪೂರ್ವ ಜಾಗೃತಿ ಆ ಕಾಲದಲ್ಲಿ ಆಯಿತು. ಅದೇ ಕಾಲದಲ್ಲಿ ಸಂಪಿಗೆ ವೆಂಕಟಸುಬ್ಬಯ್ಯನವರು ಹಿಂದೂ ಮಹಾಸಭೆಯ ಸಂಘಟನೆಗೆ ಮುಂದಾದರು. ಅವರು ಪ್ರಾರಂಭಿಸಿದ ಹಿಂದೂ ಮಹಾಸಭೆಗೂ ಅಖಿಲ ಭಾರತ ಹಿಂದೂ ಮಹಾಸಭೆಗೂ ಯಾವುದೇ ಸಂಬಂಧವಿರಲಿಲ್ಲ. ಬಿ.ಎಸ್.ಸಂಜೀವಪ್ಪ, ವಾಜಪೇಯಂ ವೆಂಕಟೇಶಯ್ಯ, ಪೊಬ್ಬತ್ತಿ ವೆಂಕಟರಾಮಯ್ಯಶೆಟ್ಟಿ ಅವರೆಲ್ಲರೂ ಹಿಂದೂ ಮಹಾಸಭೆಯಲ್ಲಿ ಪ್ರಮುಖರಾಗಿದ್ದರು.

ಆ ಕಾಲದಲ್ಲಿ ಪ್ರಜಾಮಿತ್ರ ಮಂಡಳಿಯು ಸರಕಾರದ ಪರ ವಾದವನ್ನು ಬೆಂಬಲಿಸಿತ್ತು. ಆದರೆ ಜನಸಾಮಾನ್ಯರಲ್ಲಿ ಎಲ್ಲ ವರ್ಗಗಳಲ್ಲೂ ಜವಾಬ್ದಾರಿ ಸರ್ಕಾರದ ಅವಶ್ಯಕತೆಯ ಪ್ರಶ್ನೆ ಬಲವಾಗಿ ಮನವರಿಕೆಯಾಗಿ, ಮುಂದೆ ಕೆ.ಸಿ.ರೆಡ್ಡಿಯವರಂತಹ ತರುಣರು ಅದೇ ಧ್ಯೇಯದಿಂದ ಪ್ರಜಾಪಕ್ಷವನ್ನು ಸ್ಥಾಪಿಸುವಂತೆ ಆಯಿತು. ಆದರೆ ಮಿರ್ಜಾರವರ ಪ್ರಭಾವಲಯದಲ್ಲಿದ್ದ ಬ್ರಾಹ್ಮಣೇತರ ನಾಯಕರನೇಕರು ಕಾಂಗ್ರೆಸ್ಸನ್ನು, ಅದರ ಜತೆಗೆ ಬ್ರಾಹ್ಮಣರನ್ನು

ವಿರೋಧಿಸುವಲ್ಲಿ ಅಷ್ಟೆ ಉಗ್ರರಾದರು. ಬ್ರಾಹ್ಮಣೇತರ ಗುಂಪಿನವರಾಗಿದ್ದು ಕೂಡ ಆ ಕಾಲದಲ್ಲಿ ಜವಾಬ್ದಾರಿ ಸರ್ಕಾರದ ಕಡೆ ವಾಲಿದ ಇನ್ನೊಬ್ಬ ಗಣ್ಯರೆಂದರೆ ಬಿ.ಎನ್.ಗುಪ್ತರು. ಮುಂದೆ ಶೀಘ್ರವೇ ಗುಪ್ತರು ಕಾಂಗ್ರೆಸ್ಸನ್ನು ಸೇರಿದರು. ಡಾ॥ ಹರ್ಡೇಕರ ಅವರ ಪ್ರಯತ್ನವೂ ಅದರಲ್ಲಿ ಇತ್ತು. ಗುಪ್ತರನ್ನು ಹರ್ಡೇಕರರಿಗೆ ಭೇಟಿ ಮಾಡಿಸಿದವರು ಕೆ.ಎ.ವೆಂಕಟರಾಮಯ್ಯ. ಗುಪ್ತರು ೧೯೩೭ ರಲ್ಲಿ ಕಾಂಗ್ರೆಸ್ಸಿನ ಪರ ಪ್ರಜಾಪ್ರತಿನಿಧಿ ಸಭೆಗೆ ಗೆದ್ದು ಬಂದರು.

೧೯೩೦ ರಲ್ಲಿ ಉತ್ತರ ಕರ್ನಾಟಕದ ಚಳುವಳಿಗೆ ಬೆಂಬಲ ನೀಡುವಲ್ಲಿ ಅವರ ದೃಷ್ಟಿ ಕೇಂದ್ರೀಕೃತವಾಗಿತ್ತು. ೧೯೩೨ ರಲ್ಲಿ ಕಾಂಗ್ರೆಸ್ ಪ್ರತಿಬಂಧಿತವಾಗಿ, ಧಾರವಾಡದ ಕಾಂಗ್ರೆಸ್ ಕಚೇರಿ ಮುಚ್ಚಲ್ಪಟ್ಟಾಗ ಸಂಪಿಗೆ ವೆಂಕಟಪತಯ್ಯನವರು, ಶ್ರೀನಿವಾಸರಾಯರು ಹಾಗೂ ಎಚ್.ಆರ್.ವೆಂಕಟರಾಮಯ್ಯನವರ ನೆರವಿನಿಂದ ಕರ್ನಾಟಕ ಚಳುವಳಿಯ ಕೇಂದ್ರ ಕಛೇರಿಯನ್ನು ನಡೆಸಲಾಯಿತು. ಉತ್ತರಕನ್ನಡ ಜಿಲ್ಲೆಯ ಕರನಿರಾಕರಣೆ ಚಳವಳಿಗೆ ಸಹಾಯ, ಸೂಚನೆ, ಮೇಲ್ವಿಚಾರಣೆ ಆ ಕಛೇರಿಯ ಕೆಲಸ. ಮುಂದೆ ಸಂಪಿಗೆ ವೆಂಕಟಪತಯ್ಯನವರ ಬಂಧನವಾದ ನಂತರ ಶ್ರೀನಿವಾಸರಾಯರೇ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಿದರು. ಎಚ್.ಆರ್.ವೆಂಕಟರಾಮಯ್ಯ ಆಫೀಸಿನ ಕೆಲಸವನ್ನು ಹಲವಾರು ತರುಣರ ನೆರವಿನಿಂದ ನಿರ್ವಹಿಸುತ್ತಿದ್ದರು. ಬಸವನಗುಡಿಯ ಈಸ್ಟ್ ಆಂಜನೇಯ ಟೆಂಪಲ್ ಸ್ಟ್ರೀಟ್‌ನಲ್ಲಿ ಒಂದು ಮನೆಯನ್ನು ಶ್ರೀನಿವಾಸರಾಯರು ಬಾಡಿಗೆಗೆ ಹಿಡಿದರು. ಅಲ್ಲೇ ಚಟುವಟಿಕೆ ಗುಪ್ತವಾಗಿ ನಡೆಯುತ್ತಿತ್ತು. ಆ ಎಲ್ಲ ಚಟುವಟಿಕೆ ನಡೆದಾಗ ಪೊಲೀಸರ ಕಣ್ಣು ಶ್ರೀನಿವಾಸರಾಯರ ಮೇಲೆ ಎಂದೂ ಬೀಳಲಿಲ್ಲ. ಅವರು ಎಂದೂ ಬಂಧಿತರಾಗಲಿಲ್ಲ. ದಿವಾನರಾಗಿದ್ದ ಎಂ.ಎನ್.ಕೃಷ್ಣರಾವ್ ಅವರ ಸೋದರಳಿಯ ಅವರಾದುದರಿಂದ ಬಹುಶಃ ಅವರ ಮೇಲೆ ಸಂಶಯ ತಾಳಲಿಲ್ಲವೇನೋ. ಅದು ಅವರ ಊಹೆಯಷ್ಟೆ. ಶ್ರೀನಿವಾಸರಾಯರು ಪೊಲೀಸರ ಆತಿಥ್ಯ ಪಡೆದ ಒಂದೇ ಒಂದು ಪ್ರಕರಣವೆಂದರೆ ೧೯೩೨ ರಲ್ಲಿ ಬಾಗಲಕೋಟೆಗೆ ಅವರು ಅಖಿಲ ಕರ್ನಾಟಕ ರಾಜಕೀಯ ಸಮ್ಮೇಳನಕ್ಕೂ ಮೊದಲು ಭೇಟಿ ನೀಡಿದ ಸಂದರ್ಭದಲ್ಲಿ. ಅಲ್ಲಿನ ಸಮ್ಮೇಳನ ತಯಾರಿಯ ವ್ಯವಸ್ಥೆಗಳನ್ನು ನೋಡಿಕೊಂಡು ಸೂಕ್ತ ಸೂಚನೆಗಳನ್ನು ನೀಡಿಬರಲು ವೆಂಕಟಪತಯ್ಯನವರು ಸೂಚನೆಯ ಮೇರೆಗೆ ಅಲ್ಲಿಗೆ ಅವರು ಹೋಗಿದ್ದರು. ಬೆಂಗಳೂರಿನ



ಎಸ್.ಎನ್.ಎಮ್.ರಜ್ಜಿಯವರನ್ನು ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಲು ವೆಂಕಟಪತಯ್ಯನವರು ಒಪ್ಪಿಸಿದ್ದರು. ಒಂದು ವೇಳೆ ಅವರ ಬಂಧನವಾದಲ್ಲಿ ತಾಳಕೆರೆ ಸುಬ್ರಹ್ಮಣ್ಯಂ ಅಧ್ಯಕ್ಷರಾಗಬೇಕೆಂದು ನಿರ್ಣಯಿಸಲಾಗಿತ್ತು. ದಿ॥ ಕೆರೂರು ವಾಸುದೇವಾಚಾರ್ಯ ಅವರ ಮಗ ಸ್ವಾಮಿರಾವ್ ವಕೀಲರಲ್ಲಿ ಶ್ರೀನಿವಾಸರಾವ್ ಉಳಿದುಕೊಂಡಿದ್ದು ಆಗಲೇ ಪೊಲೀಸರು ಅವರನ್ನು ಬಂಧಿಸಿ ಸ್ಟೇಷನಿಗೊಯ್ದರು. ಶ್ರೀನಿವಾಸರಾಯರು ಸತ್ಯಶೋಧನ ಪ್ರಕಟಣಾಲಯ ಪರ ಪುಸ್ತಕದ ವ್ಯಾಪಾರ ವ್ಯವಹಾರಕ್ಕಾಗಿಯೇ ಬಂದಿದ್ದೇನೆಂದು, ನಿಜವಾಗಿ ರಾಜಕೀಯ ಕಾರಣಕ್ಕಾಗಿ ಬಂದವರು ಬೇರೆಯೇ ಇರಬಹುದೆಂದು ಪೊಲೀಸರಿಗೆ ತಿಳಿಸಿದರು. ಹಲವು ತಾಸುಗಳ ನಂತರ ಅವರನ್ನು ಬಿಡುಗಡೆ ಮಾಡಿದರು. ಬಾಗಲಕೋಟೆಯಲ್ಲಿ ಕಾರ್ಯಕರ್ತರಿಗೆ ಸೂಕ್ತ ಸೂಚನೆ ನೀಡಿ ಅಲ್ಲಿಂದ ಧಾರವಾಡಕ್ಕೆ ಬಂದು ಅಲ್ಲಿ ಡಾ॥ ಕಾಂತರಾವ್ ಕಮಲಾಪುರ ಅವರಿಗೆ ಎಲ್ಲ ವರದಿ ನೀಡಿ ಬೆಂಗಳೂರಿಗೆ ಮರಳಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕರನಿರಾಕರಣೆ ಚಳುವಳಿ ನಡೆಯುತ್ತಿದ್ದ ಕಾಲದಲ್ಲಿ ಬೆಂಗಳೂರಿನಿಂದಲೇ ಹಣಸಹಾಯವನ್ನು ಕಳುಹಿಸಲಾಗುತ್ತಿತ್ತು. ಮುಂಬಯಿಯಿಂದಲೂ ಹಣ ಬರುತ್ತಿತ್ತು. ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್ ಅವರು ಮುಂಬಯಿಯ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳಿಂದ ಹಣ ಸಂಗ್ರಹಿಸಿ ಹಣವನ್ನು ಮೇಲಿಂದ ಮೇಲೆ ವ್ಯಕ್ತಿಗಳ ಕೈಗೆ ಕೊಟ್ಟು ನಗದಾಗಿ ಕಳುಹಿಸುತ್ತಿದ್ದು, ಬೆಂಗಳೂರಿನಿಂದ ಶಿವಮೊಗ್ಗ ಮುಖಾಂತರ ಕೆ.ಎ.ವೆಂಕಟರಾಮಯ್ಯನವರಿಗೆ ಕಳುಹಿಸಿ ಕೊಡಲಾಗುತ್ತಿತ್ತು. ಡಾ॥ ಪಾರ್ಥನಾರಾಯಣ ಪಂಡಿತ್, ಭೂಪಾಲಂ ಚಂದ್ರಶೇಖರಯ್ಯ, ದೇವಂಗಿ ಮಾನಪ್ಪ ಮುಂತಾದವರೆಲ್ಲ ಶಿವಮೊಗ್ಗದಲ್ಲಿ ಚಳುವಳಿಗೆ ಬೆಂಬಲವಾಗಿ ನಿಂತವರು. ಬೆಂಗಳೂರಿನಲ್ಲಿ ಸ್ಥಾಪಿಸಿದ್ದ ಉತ್ತರಕನ್ನಡ ಜಿಲ್ಲೆಯ ಸತ್ಯಾಗ್ರಹಿಗಳ ಮಕ್ಕಳ ಬಾಲಿಕಾಶ್ರಮದ ಖರ್ಚು ಅವರೇ ನೀಗಿಸುತ್ತಿದ್ದು, ಮಾಲೂರು ಶಂಕರಪ್ಪ ಬಾಲಿಕಾಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು.

೧೯೪೨ ರಲ್ಲಿ ಎಲ್ಲರ ಬಂಧನ ಆದಾಗ ಶ್ರೀನಿವಾಸರಾವ್, ಎಚ್.ಆರ್. ವೆಂಕಟರಾಮಯ್ಯ ಆಫೀಸಿನ ಕೆಲಸ ನೋಡಿಕೊಳ್ಳುತ್ತಿದ್ದರು. ಮುಂಬಯಿಯಿಂದ

ಪುರುಷೋತ್ತಮದಾಸ್, ಠಾಕೋದಾಸ್ ಮುಂತಾದವರು ಹಣ ಕಳುಹಿಸುತ್ತಿದ್ದರು. ಎಂ.ಎಚ್.ಷಾ, ಬುದ್ಧದಾಸ್, ಎಚ್.ಸಿ.ವೇಣುಗೋಪಾಲ್ ಭೂಗತ ಚಟುವಟಿಕೆ ನಡೆಸುತ್ತಿದ್ದವರಲ್ಲಿ ಪ್ರಮುಖರು. ಎಚ್.ಎಸ್.ಸೀತಾರಾಮ್ ಭೂಗತ ಕಾರ್ಯ ನಡೆಸುತ್ತಿದ್ದರೂ ಕಡೇತನಕ ಬಂಧಿತರಾಗಲಿಲ್ಲ. ಎಚ್.ಎಸ್.ದೊರೆಸ್ವಾಮಿ, ಬೇಲೂರು ಬಳಿಯ ಪಪ್ಪು ಗೌಡರು ಇತರ ಕಾರ್ಯಕರ್ತರು. ಎಂ.ಜಿ.ರಾಮಚಂದ್ರರಾಯರು ಚಳುವಳಿಯ ಮಾರ್ಗದರ್ಶನ ಮಾಡುತ್ತಿದ್ದು ಮುಂದೆ ಬಂಧಿತರಾದರು. ಕಮಲಾದೇವಿ ಚಟ್ಟೋಪಾಧ್ಯಾಯರು ಎನ್.ಆರ್.ಕಾಲನಿಯ ಒಂದು ಮನೆಯಲ್ಲಿ ಇದ್ದು, ಮುಂದೆ ಬೆಂಗಳೂರಿನಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾದರು.

ಕೆ.ಆರ್.ಶ್ರೀಧರಮೂರ್ತಿಯವರು ನ್ಯಾಷನಲ್ ಹೈಸ್ಕೂಲಿನ ವಿದ್ಯಾರ್ಥಿ. ಅವರ ಅನುಭವದ ಕಥನವನ್ನು ನೋಡೋಣ. ಬೆಂಗಳೂರಿನಲ್ಲಿ ಅವರು ಮಿಡಲ್‌ಸ್ಕೂಲ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಬೆಳ್ಳಾವೆ ನರಹರಿಶಾಸ್ತ್ರಿಗಳು ಉಪಾಧ್ಯಾಯರಾಗಿದ್ದು ಅವರು ತುಂಬಿದ್ದ ಭಾಷಾಭಿಮಾನ, ದೇಶಾಭಿಮಾನಗಳು ಸ್ಮರಣೀಯವಾದವುಗಳು. ಆ ಕಾಲದಲ್ಲಿ ನ್ಯಾಷನಲ್ ಹೈಸ್ಕೂಲಿನ ಮೈದಾನದಲ್ಲಿ ಬೆಂಗಳೂರು ಸೇವಾದಳ ನಡೆಯುತ್ತಿದ್ದು, ರಜೆಯ ದಿನಗಳಲ್ಲಿ ಸೇವಾದಳ ಸೇರಿ ತರಬೇತಿ ಪಡೆದರು. ಕೆ.ಎಸ್.ಕೃಷ್ಣಯ್ಯರ್ ಮಗ ಮಣಿ ಮತ್ತು ಎಸ್.ಆರ್. ಸುಬ್ಬರಾವ್ ತರಬೇತಿ ಕೊಟ್ಟವರು. ಮುಂದೆ ನ್ಯಾಷನಲ್ ಹೈಸ್ಕೂಲು ಸೇರಿ ಅಲ್ಲಿನ ಸೇವಾದಳದಲ್ಲಿ ಐದು ಶತಕ ಗಳಲ್ಲಿ ಒಂದಾದ ರಘುವೀರ ಶತಕದ ನಾಯಕರಾದರು. ಕೆ.ವಿ.ವಸಂತಯ್ಯ, ಡಿ.ಆರ್.ಸೂರ್ಯ ನಾರಾಯಣರಾವ್, ಬಿ.ಎಸ್.ನಾರಾಯಣರಾವ್ ಇವರೆಲ್ಲ ಇತರ ನಾಯಕರು. ೧೯೩೦–೩೧ ರಲ್ಲಿ ನ್ಯಾಷನಲ್ ಹೈಸ್ಕೂಲಿನ ಅಧ್ಯಾಪಕರಿಗೂ ಸೇವಾದಳದ ತರಬೇತಿಯನ್ನು ನೀಡಿದರು. ೧೯೩೧ ರಿಂದ ೧೯೩೪ ರ ನಡುವೆ ಏನೇ ಸಾರ್ವಜನಿಕ ಸಭೆ, ಸಮ್ಮೇಳನ ನಡೆದರೂ ಅಲ್ಲಿನ ವ್ಯವಸ್ಥೆಗೆ ಸೇವಾ ದಳಕ್ಕೆ ಕರೆ ಬರುತ್ತಿತ್ತು.

೧೯೩೪ ರಲ್ಲಿ ಗಾಂಧೀಜಿ ಬಂದಾಗ ಮೂರು ದಿನ ಕುಮಾರಕೃಪಾದಲ್ಲಿ ಅವರ ವಾಸ್ತವ್ಯದ ಎಲ್ಲ ವ್ಯವಸ್ಥೆಗಳನ್ನು ಅವರೇ ನೋಡಿಕೊಂಡರು. ಬೆಳಿಗ್ಗೆ ಬೇಗ ಏಳಲು ಎಚ್ಚರಿಕೆ ಆಗುವುದಿಲ್ಲವೆಂದು ಶ್ರೀಧರಮೂರ್ತಿಗಳು ತಿಳಿಸಿದಾಗ,



"ಯಾವ ಹೊತ್ತಿಗೆ ಏಳಬೇಕೆಂದು ಮನಸ್ಸಿಗೆ ಆಜ್ಞೆ ನೀಡು" ಎಂದು ಗಾಂಧೀಜಿ ಸೂಚಿಸಿದರು. ಅದರಂತೆ ಯತ್ನಿಸಿ ಯಶಸ್ವಿಯಾಗಿ, ಇಂದಿಗೂ ಅದೇ ಅಭ್ಯಾಸ ಮುಂದುವರಿದಿದೆ; ಅಲಾರಂ ಬೇಕಾಗಿಲ್ಲ. ನ್ಯಾಷನಲ್ ಹೈಸ್ಕೂಲಿನಲ್ಲಿ ಸಿಕ್ಕ ತರಬೇತಿಯೇ ಮುಂದಿನ ಅವರ ರಾಷ್ಟ್ರೀಯ ಚಟುವಟಿಕೆಗಳಿಗೆಲ್ಲ ಯೋಗ್ಯ ತರಬೇತಿಯಾಯಿತು. ೧೯೩೪ ರಲ್ಲಿ ಮೆಟ್ರಿಕ್ ಮುಗಿಸಿದ ಮೇಲೂ ಸೇವಾದಳದ ಚಟುವಟಿಕೆಗಳನ್ನು ಮುಂದುವರೆಸಿದರು.

೧೯೩೭ ರಲ್ಲಿ ಅವರು ಬಸವನಗುಡಿ ವಾರ್ಡ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾದರು. ಎಲ್.ಎಸ್.ರಾಜು ಅವರು ಅಧ್ಯಕ್ಷರು. ೧೯೩೮ ರಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷರಾದರು. ಅವರಿಗೆ ಹಿಂದೆ ಎಚ್.ಎಸ್.ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿದ್ದರು. ೧೯೩೮ ರಲ್ಲಿ ರಾಮಲಾಲ್ ತಿವಾರಿ ಸಿಟಿ ಕಮಿಟಿಯ ಅಧ್ಯಕ್ಷರಾಗಿದ್ದರು. ಮುಂದೆ ಎಚ್.ಪಿ.ಸೂರ್ಯನಾರಾಯಣರಾವ್ ಮತ್ತು ಶ್ಯಾಮರಾಜ್ ಅಯ್ಯಂಗಾರ್ ಸಿಟಿ ಕಾಂಗ್ರೆಸ್ ಅಧ್ಯಕ್ಷರಾದರು.

ಆ ಸಮಯದಲ್ಲಿ ಹಿಂದಿ ಪ್ರಚಾರ ಕಾರ್ಯದಲ್ಲಿ ಕ್ರಿಯಾಶೀಲರಾಗಿ ಗುರುತಿಸಿಕೊಂಡರು. ವಿಶ್ವಾಮಿತ್ರ ಅವರು ಮೊದಲ ಅಧ್ಯಾಪಕರಾಗಿದ್ದು ಆ ಕಾರ್ಯದಲ್ಲಿ ವಿಶೇಷವಾಗಿ ದುಡಿದವರು. ೧೯೩೯ ರಲ್ಲಿ ವಿಶ್ವೇಶ್ವರಪುರದಲ್ಲಿ ಹಿಂದಿ ಕೇಂದ್ರ ತೆರೆದರು. ಚಾಮರಾಜಪೇಟೆಯಲ್ಲಿ ಹಿಂದಿ ಡಿಬೇಟಿಂಗ್ ಸೊಸೈಟಿ ಆರಂಭಿಸಿದರು. ಅಲ್ಲೆಲ್ಲ ಉಚಿತ ಪಾಠ ಹೇಳಲಾಗುತ್ತಿತ್ತು. ಹಿಂದಿ ಕಲಿಯಲು ನೂರಾರು ಮಹಿಳೆಯರು ಬರುತ್ತಿದ್ದರು. ಈ ಮೂಲಕ ರಾಷ್ಟ್ರೀಯ ಚುಟುವಟಿಕೆಯತ್ತ ಮಹಿಳೆಯರನ್ನು ಆಕರ್ಷಿಸಲು ಸಾಧ್ಯವಾಯಿತು. ಕೆಲವು ಹಿಂದಿ ಅಧ್ಯಾಪಕರ ಶೀಲದ ಬಗ್ಗೆ ಜನ ಆಡಿಕೊಳ್ಳುವುದನ್ನು ತಪ್ಪಿಸಲು ಮಹಿಳೆಯರಿಗೆ ಮಹಿಳೆಯರಿಂದಲೇ ಪಾಠ ಹೇಳಿಸುವ ವ್ಯವಸ್ಥೆ ಮಾಡಲಾಯಿತು. ೧೯೪೦ ರಲ್ಲಿ ರಿಯಾಸತ್ ಹಿಂದಿ ಸಮಿತಿ ಬೆಂಗಳೂರಿಗೆ ಬರುವ ಹೊತ್ತಿಗೆ ಬೆಂಗಳೂರಿನಲ್ಲಿ ೪೦ ಕೇಂದ್ರಗಳಲ್ಲಿ ಹಿಂದಿ ಶಿಕ್ಷಣ ನಡೆಯುತ್ತಿತ್ತು. ರಾಮಸ್ವಾಮಿ ಅಯ್ಯಂಗಾರ್ ರಿಯಾಸತ್ ಸಮಿತಿಯ ಅಧ್ಯಕ್ಷರಾಗಿದ್ದರು. ಶಿವಾನಂದ ಶರ್ಮರು ಕಾರ್ಯದರ್ಶಿ ಹಾಗೂ ಶ್ರೀಧರಮೂರ್ತಿಗಳು ಸಹಕಾರ್ಯದರ್ಶಿಯಾಗಿದ್ದರು. ೧೯೪೪ ರಲ್ಲಿ ಅವರೇ ಕಾರ್ಯದರ್ಶಿಗಳಾದರು. ಹಿಂದಿ ಪ್ರಚಾರದಿಂದಾಗಿ

ಅನೇಕ ಮಹಿಳೆಯರು ಕಾಂಗ್ರೆಸ್ ಸೇರಿದರಲ್ಲದೇ, ಶಿವಪುರ ಕಾಂಗ್ರೆಸ್ಸಿಗೆ ೧೯೩೮ ರಲ್ಲಿ ಬಿ.ಎಲ್.ಅನ್ನಪೂರ್ಣಮ್ಮನವರ ನೇತೃತ್ವದಲ್ಲಿ ಬೆಂಗಳೂರಿನಿಂದ ೧೦೦ ಮಹಿಳೆಯರು ಹೋಗಿದ್ದರು. ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ನಡೆಸಲಾದ ಗುಪ್ತ ಚಟುವಟಿಕೆಗಳಲ್ಲಿ ಇಂಥ ಮಹಿಳೆಯರಿಂದ ತುಂಬಾ ಸಹಾಯವಾಯಿತು.

೧೯೩೭ ರಲ್ಲಿ ಜನಜಾಗೃತಿ ಸಂಘ ಆರಂಭವಾದಾಗ ಶ್ರೀಧರಮೂರ್ತಿಯವರು ಕ್ರಿಯಾಶೀಲ ಕಾರ್ಯಕರ್ತರಾಗಿದ್ದರು. ಎಂ.ಶಂಕರ್, ಎನ್.ಡಿ.ಶಂಕರ್, ಸಿ.ಬಿ.ಮೊಣ್ಣಯ್ಯ ಅದರ ಪ್ರಮುಖ ಕಾರ್ಯಕರ್ತರು. ಕೆ.ವಿ.ವಸಂತಯ್ಯ, ಸಿದ್ಧರಾಮಣ್ಣ, ಆಳ್ವಾ ಸೇರಿ ಶಿವಪುರಕ್ಕೆ ನಡೆದುಕೊಂಡೇ ಹೋಗಿದ್ದರು. ಅಲ್ಲಿ ಪ್ರತಿಬಂಧಕಾಜ್ಞೆ ಮುರಿಯುವುದು ಬೇಡವೆಂಬುದು ಹಿರಿಯ ನಾಯಕರ ಅಭಿಪ್ರಾಯವಾಗಿದ್ದರೂ ಅವರು ಆಜ್ಞೆ ಮುರಿಯಬೇಕೆಂದು ಉಗ್ರ ಪ್ರದರ್ಶನ ನಡೆಸಿದರು.

ಬೆಂಗಳೂರಿನಲ್ಲಿ ಯೂತ್ ಕಾಂಗ್ರೆಸ್ಸಿನ ಆಶ್ರಯದಲ್ಲಿ ಅಖಿಲ ಕರ್ನಾಟಕ ವಿದ್ಯಾರ್ಥಿ ಸಮ್ಮೇಳನವನ್ನು ೧೯೩೭ ರಲ್ಲಿ ನಡೆಸಿದರು. ಎನ್.ಡಿ.ಶ್ರೀರಂಗಾಚಾರ್ ಅಧ್ಯಕ್ಷರು. ಅದರ ಉದ್ಘಾಟನೆಗೆ ಬಂದಿದ್ದ ಎಂ.ಆರ್.ಮಸಾನಿಯವರು ಭಾಷಣ ಮಾಡದಂತೆ ೧೪೪ ನೇ ಸೆಕ್ಷನ್ ಜಾರಿ ಮಾಡಿದರೂ ಸಮ್ಮೇಳನವನ್ನು ನಡೆಸಿಯೇ ಬಿಟ್ಟರು. ಯೂತ್ ಕಾಂಗ್ರೆಸ್ಸಿನ ಚಟುವಟಿಕೆಗಳು ಹೆಚ್ಚಾದಂತೆ ಜನಜಾಗೃತಿ ಸಂಘದ ಸಂಪರ್ಕ ಕಡಿಯಿತು. ಹೊಳೆನರಸೀಪುರದಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ, ಸಧ್ಯಕ್ಕೆ ಸ್ವಾತಂತ್ರ್ಯದ ಪ್ರಶ್ನೆಯನ್ನು ಬದಿಗಿಟ್ಟು, ಜವಾಬ್ದಾರಿ ಸರ್ಕಾರದ ಚಳುವಳಿಗೆ ಒತ್ತು ಕೊಡೋಣ ಎಂದು ಕೆಲವು ನಾಯಕರು ವಾದಿಸಿದರು. ಇಂಥ ನಿಲುವಿನ ವಿರುದ್ಧ 'ಪ್ರಗತಿ ಪಕ್ಷ'ವೆಂಬ ತರುಣ ಗುಂಪನ್ನು ಕೆಲವು ಗೆಳೆಯರು ಕಟ್ಟಿದರು. ಹೋ.ಚಿ.ಬೋರಣ್ಣಗೌಡ, ಎಂ.ಆರ್.ಎನ್.ಶಾಸ್ತ್ರೀ, ದೊಡ್ಡಬಳ್ಳಾಪುರದ ಭದ್ರಣ್ಣ, ಎಂ.ಎನ್.ಸೀತಾರಾಮಯ್ಯ, ಎಂ.ದೊರೆಸ್ವಾಮಿ, ಟಿ.ಕೆ.ಗಂಗಿರೆಡ್ಡಿ, ಕೆ.ಎಸ್.ಕುಮಾರನ್, ಎಚ್.ಎಸ್.ದೊರೆಸ್ವಾಮಿ ಅವರೆಲ್ಲ ಅದರಲ್ಲಿ ಸೇರಿಕೊಂಡರು. ಶ್ರೀಧರಮೂರ್ತಿಯವರು ಅದರ ಕಾರ್ಯಕರ್ತರಾಗಿದ್ದರು. ಪ್ರಗತಿ ಪಕ್ಷದ ಮುಖವಾಣಿಯಾಗಿ 'ಪೌರವಾಣಿ' ಪತ್ರಿಕೆ ಆರಂಭಿಸಿದರು.



ಆರಂಭದಲ್ಲಿ ಅದು ಪಾಕ್ಷಿಕ ಪತ್ರಿಕೆ. ಕೆ.ಎಸ್.ಎಸ್.ಶಾಸ್ತ್ರಿ ಅದರ ಪ್ರಥಮ ಸಂಪಾದಕರು. ಎಂ.ಎನ್.ಸೀತಾರಾಮಯ್ಯ, ಕುಮಾರನ್, ದೊಡ್ಡಬಳ್ಳಾಪುರದ ಭದ್ರಣ್ಣ, ಎಂ.ಎನ್.ಜೋಯಿಸ್ ಮುಂತಾದವರು ಪತ್ರಿಕೆಯ ಆರಂಭಕ್ಕೆ ಕಾರಣರು. ಮುಂದೆ ಪತ್ರಿಕೆಯು ಸಾಪ್ತಾಹಿಕವಾದಾಗ ಭದ್ರಣ್ಣ ಸಂಪಾದಕರಾದರು. ಭದ್ರಣ್ಣ ತೀರಿಕೊಂಡ ನಂತರ ಎಚ್.ಎಸ್.ದೊರೆಸ್ವಾಮಿ ಸಂಪಾದಕರಾದರು. ೧೯೪೭ ರಲ್ಲಿ ಹಿಂದೂಪುರಕ್ಕೆ ಪತ್ರಿಕೆಯನ್ನು ಸಾಗಿಸಿದಾಗ ಅದು ದೈನಿಕವಾಗಿ ದೊರೆಸ್ವಾಮಿಯವರೇ ಅದರ ಜವಾಬ್ದಾರಿ ವಹಿಸಿದರು. ಮದ್ರಾಸಿನಿಂದ ಗೋಯಂಕಾ, ಕಸ್ತೂರಿ, ಶ್ರೀನಿವಾಸನ್ ಇವರೆಲ್ಲ ನೂರಾರು ರಿಮ್ ಕಾಗದಗಳನ್ನು ಪತ್ರಿಕೆಗಳಿಗೆ ಒದಗಿಸಿದರು. ಆ ಕಾಲದಲ್ಲಿ ಪತ್ರಿಕೆಯ ವಿತರಣೆ ಮುಂತಾದ ಫೀಲ್ಡ್ ವರ್ಕ್ ಶ್ರೀಧರಮೂರ್ತಿಯವರು ಮಾಡುತ್ತಿದ್ದರು.

೧೯೩೯ ರ ಕೆಜಿಎಫ್ ಸತ್ಯಾಗ್ರಹಕ್ಕೆ ಅನೇಕರನ್ನು ಬೆಂಗಳೂರಿನಿಂದ ಕಳುಹಿಸಿ, ಒಂದು ತಂಡವನ್ನು ಅಗರಂ ತನಕ ಬಿಟ್ಟು ಬರಲು ಕೊಟ್ಟ ಸೂಚನೆಯಂತೆ ಎಸ್.ನಾರಾಯಣರಾವ್, ಕೆ.ಶೇಖರಪ್ಪ ಮುಂತಾದ ಸತ್ಯಾಗ್ರಹಿಗಳೊಂದಿಗೆ ಹೋಗಿ ಕ್ಯಾಸಂಬಳ್ಳಿಗೆ ತಲುಪಿದರು. ಕೆಜಿಎಫ್ ಗಡಿ ದಾಟದಂತೆ ಇಡಲಾದ ಸೆಂಟ್ರಿಗಳನ್ನು ಬೆಳಿಗ್ಗೆ ೫:೩೦ ಕ್ಕೆ ಬದಲಾಯಿಸುವ ವೇಳೆಗೆ ಮರುದಿನ ಗಡಿದಾಟಿ ರಾಬರ್ಟ್‌ಸನ್ ಪೇಟೆಗೆ ಹೋಗಿ ಅಲ್ಲಿ ಘೋಷಣೆ ಕೂಗಿದರು. ಅಲ್ಲಿ ಬಂಧಿಸಿ ಲಾಕಪ್ಪಿನಲ್ಲಿಟ್ಟರು. ಅಂದು ಅನಂತ ಚತುರ್ದಶಿ ಆಗಿತ್ತು. ಅಲ್ಲಿನ ಪೊಲೀಸ್ ಅಧಿಕಾರಿ ಹೆಬ್ಳೀಕರ್ ಅವರ ಮನೆಯಿಂದ ಒಬ್ಬಟ್ಟು ಸಹಿತ ಊಟ ಬಂತು. "ಕಾಫಿಗೆ ಹೋಗೋಣ ಬನ್ನಿ" ಎಂದು ಸಂಜೆ ವ್ಯಾನ್ ಹತ್ತಿಸಿ ತಿರುಪತಿ ರಸ್ತೆಯಲ್ಲಿ ಮುಳಬಾಗಲು ದಾಟಿಸಿ ಒಬ್ಬೊಬ್ಬರನ್ನೇ ಕತ್ತಲಲ್ಲಿ ಇಳಿಸಿ ಬಿಟ್ಟರು. ಈ ತಂತ್ರ ಮೊದಲೇ ತಿಳಿದಿದ್ದರಿಂದ ಮೂರನೆಯವನ ಕೈಯಲ್ಲಿ ಪಂಜು ಉರಿಸಲು ಬೇಕಾದ ಸಾಮಾನುಗಳ ಗಂಟನ್ನು ಮೊದಲೇ ಕೊಟ್ಟಿದ್ದರು. ಈ ಪಂಜಿನವರ ನೆರವಿನಿಂದ ಇತರ ನಾಲ್ವರೂ ನಡೆದು ಒಟ್ಟುಗೂಡಿ ಮುಳಬಾಗಲು ಬಳಿಯ ಗಡಿಯ ಒಂದು ಹಳ್ಳಿಯಲ್ಲಿದ್ದ ಶ್ರೀನಿವಾಸರೆಡ್ಡಿ ಎಂಬ ಸಹಪಾಠಿ ಮನೆಗೆ ರಾತ್ರಿ ಮೂರು ಗಂಟೆಗೆ ಹೋಗಲು, ಆ ಅವೇಳೆಯಲ್ಲೂ ಆತ ಅಡಿಗೆ ಮಾಡಿಸಿ ಎಲ್ಲರಿಗೂ ಊಟ ಹಾಕಿದ. ಮರುದಿನ ಮುಳಬಾಗಲಿಗೆ ಹೋಗಲು ಅಲ್ಲಿನ ವೈಶ್ಯ ಸಮಾಜದವರು ಮಧ್ಯಾಹ್ನದ ಊಟದ ವ್ಯವಸ್ಥೆ

ಮಾಡಿದರು. ರಾತ್ರಿ ಬಲ್ಲಕ್ಕೆ ಬಂದು ಅಲ್ಲಿ ಬಲ್ಲಂ ಪುಟ್ಟಣ್ಣನವರ ಮನೆಯಲ್ಲಿ ಊಟ ಮಾಡಿದರು. ನಂತರ ಅವರು ಗಾಡಿ ಕಟ್ಟಿಸಿ, ದಿಬ್ಬಣದವರೆಂದು ಹೇಳಿ ಬೇತಮಂಗಲ ಮೂಲಕ ಕೆಜಿಎಫ್ ತಲುಪಿದರು. ಅಲ್ಲಿ ಮತ್ತೆ ಸತ್ಯಾಗ್ರಹ ಮಾಡಲು, ಬಂಧಿಸಿ ಮ್ಯಾಜಿಸ್ಟ್ರೇಟ್ ಜೆ.ಬಿ.ಮಲ್ಲಾರಾಧ್ಯರ ಮುಂದೆ ನಿಲ್ಲಿಸಿದರು. ಅವರು ೫೦ ರೂ ದಂಡ ವಿಧಿಸಲು, "ದಂಡ ಕೊಡದಿದ್ದರೆ ಹೇಗೆ" ಎಂದರು. ಏಳು ದಿನ ಜೈಲುವಾಸದ ಶಿಕ್ಷೆ ನೀಡಿದರು. "ಇದು ತೀರಾ ಕಡಿಮೆ" ಎಂದರು. "ಇನ್ನೊಮ್ಮೆ ಬಾ, ಹೆಚ್ಚು ಶಿಕ್ಷೆ ಕೊಡುತ್ತೇನೆ" ಎಂದರು. ಇದೇ ಶ್ರೀಧರಮೂರ್ತಿಯವರಿಗೆ ಆದ ಮೊದಲ ಜೈಲುವಾಸ. ಅವರು ಬೆಂಗಳೂರು ಸೆಂಟ್ರಲ್ ಜೈಲಿಗೆ ಬಂದಾಗ ಕೆಜಿಎಫ್ ಸತ್ಯಾಗ್ರಹದ ಶಿಬಿರಾಧಿಪತಿಯಾದ ಎಂ.ದೊರೆಸ್ವಾಮಿಯುವರ ಸಹಿತ ೧೦೦೦ ಜನ ಅಲ್ಲಿದ್ದರು. ಕೆ.ಹನುಮಂತಯ್ಯನವರು ಆಗ ಜೈಲಿನಲ್ಲಿದ್ದರು. ಕೇವಲ ಸತ್ಯಾಗ್ರಹಿಗಳನ್ನು ಬಿಟ್ಟು ಬರಲು ಶ್ರೀಧರಮೂರ್ತಿಯವರಿಗೆ ತಿಳಿಸಿದ್ದರೂ ಅವರೇ ಸತ್ಯಾಗ್ರಹ ಮಾಡಿದ ಬಗ್ಗೆ ಅವರ ಅಧಿಕಾರಿಗಳಿಂದ ಬೈಗುಳ ತಿನ್ನಬೇಕಾಯಿತು.

ಅವರು ಬಿಡುಗಡೆ ಆಗಿ ಬಂದ ಕಾಲದಲ್ಲಿ ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ತರುಣರೆಲ್ಲ ಸೇರಿ ಒಂದು ಮೆರವಣಿಗೆಯನ್ನು ಸಂಘಟಿಸಿದ್ದು, ಬಳೇಪೇಟೆ ಇಂಡಿಯನ್ ಎಕ್ಸ್‌ಪ್ರೆಸ್ ಬಳಿ ಮೆರವಣಿಗೆಯನ್ನು ತಡೆದು ನಾಯಕನಾರು ಎಂದು ಕೇಳಿದರು. ಕಬ್ಬನ್ ಪೇಟೆ ರಾಮಸ್ವಾಮಿ ಕಾಂಗ್ರೆಸ್ ಆಫೀಸಿಗೆ ಬಂದು ವಿಷಯ ತಿಳಿಸಿದ. ಕೇಶವಯ್ಯಂಗಾರ್ ಅವರ ಮನೆಯಲ್ಲಿ ಆಫೀಸು ಇತ್ತು. ಶ್ರೀಧರಮೂರ್ತಿ ಮತ್ತು ಹಣ್ಣಿನ ಅಂಗಡಿ ಗೋಪಾಲಪ್ಪ ಹೋಗಿ "ನಾವೇ ಲೀಡರ್ಸ್" ಎಂದರು. ತಕ್ಷಣ ಅವರಿಬ್ಬರ ಬಂಧನವಾಗಿ, ಸಂಜೆ ೫೦ ರೂ ದಂಡ ಇಲ್ಲವೇ ಎರಡು ತಿಂಗಳ ಶಿಕ್ಷೆ ವಿಧಿಸಿದರು. ಆ ದಿನ ರಾತ್ರಿ ಮನೆಯಲ್ಲಿ ನವರಾತ್ರಿ ಹಬ್ಬ ನಡೆದಿತ್ತು. ಸೆಂಟ್ರಲ್ ಜೈಲಲ್ಲಿ ಸಿಂಪಲ್ ಬ್ಯಾರಕ್ ಎಂದು ಕರೆಯಲಾಗುವ ಯುರೋಪಿಯನ್ ಬ್ಯಾರೆಕ್‌ನಲ್ಲಿದ್ದರು. ಜೈಲಿನಲ್ಲಿ ತುರುವನೂರು, ಶಿರಾ ಹಾಗೂ ಬೆಂಗಳೂರು ಪೇಟೆಯಿಂದ ಬಂದ ಅನೇಕರಿದ್ದರು. ಜೈಲಿನಲ್ಲಿ ಉರ್ದು ಕಲಿಯಲು ಅವಕಾಶವಾಯಿತು. ಜೈಲಿನಲ್ಲಿ ಆಗ ಟಿ.ಸಿದ್ದಲಿಂಗಯ್ಯ, ಎಂ.ಜಯಶೀಲ, ಎಸ್.ಎನ್.ಚೆಂದೂರ್, ಎಸ್.ಎನ್.ಗುಪ್ತ



ಅವರೆಲ್ಲ ಇದ್ದರು. ಕನಕಪುರದ ವೆಂಕಟಾಚಲಂ ಜೈಲುವಾಸದಲ್ಲಿದ್ದಾಗಲೇ, ಇತ್ತ ಊರಿನಲ್ಲಿ ಅವರ ಪತ್ನಿ ತೀರಿಕೊಂಡ ಸುದ್ದಿ ಬಂದಿತು. ತಾಳಕೆರೆ ಸುಬ್ರಹ್ಮಣ್ಯಂ ಅವರಿಗೆ ಧೈರ್ಯ ಹೇಳಿ ಉಳಿಸಿಕೊಂಡರು. ಆದರೆ ಅದೇ ಮನುಷ್ಯ ಮುಂದೆ ೧೫ ದಿನದಲ್ಲಿ ಬೀಡಿ ಸಿಗಲಿಲ್ಲವೆಂಬ ಸಬೂಬು ಹೇಳಿ, ಕ್ಷಮೆ ಕೇಳಿ ಬಿಟ್ಟುಹೋದರು.

೧೯೪೨ ರಲ್ಲಿ 'ಪೌರವಾಣಿ' ಕಾರ್ಯಾಲಯದಲ್ಲಿ ಶ್ರೀಧರಮೂರ್ತಿಗಳು ಇರುತ್ತಿದ್ದರು. ಖಾದಿ ವಸ್ತ್ರಾಲಯಕ್ಕೆ ಹೋಗಿ ಅಲ್ಲಿಂದ 'ಪೌರವಾಣಿ' ಕಾರ್ಯಾಲಯಕ್ಕೆ ಹೋದಾಗ ಎಂ.ಎನ್.ಸೀತಾರಾಮಯ್ಯನವರ ಬಂಧನವಾಯಿತು ಕಾರ್ಯಾಲಯ ಹಾಗೇ ತೆರೆದೇ ಇತ್ತು. ರಾತ್ರಿ ಕೆ.ಹನುಮಂತಯ್ಯನವರ ಮನೆಗೆ ಹೋದರು. ಅವರು ಸಿಗಲಿಲ್ಲ. ಎಚ್.ಸಿ.ಸೂರ್ಯನಾರಾಯಣರಾಯರ ಮನೆಗೆ ಹೋಗಿ ಎಲ್ಲ ವಿವರ ತಿಳಿದುಕೊಂಡು ಕಾರ್ಯಾಲಯದಲ್ಲಿಯೇ ಮಲಗಿ, ಸೈಕಲ್ ಮೆಟ್ಟಿಕೊಂಡು ಸೆಂಟ್ರಲ್ ಕಾಲೇಜಿಗೆ ಹೋಗಲು ಅಲ್ಲಿ ಸಭೆ ಸಂಘಟಿಸಿದ್ದರು. ಕೆ.ವಿ.ವಸಂತಯ್ಯ, ಸಿದ್ಧರಾಮಣ್ಣ ಮತ್ತು ಶ್ರೀಧರಮೂರ್ತಿ ಭಾಷಣ ಮಾಡಿದರು. ಅಲ್ಲಿಂದ ಮೆರವಣಿಗೆ ಹೊರಟು ಮೈಸೂರು ರೋಡಿನಿಂದ ಮಾರ್ಕೆಟ್‌ಗೆ ಬಂದು ಚದುರಿದರು. ಹನ್ನೊಂದು ಗಂಟೆಗೆ 'ಪೌರವಾಣಿ' ಕಾರ್ಯಾಲಯಕ್ಕೆ ಹೋಗುತ್ತಿರಲು ಸಿಐಡಿ ರಾಜಗೋಪಾಲ್ "ಊಟಕ್ಕೆ ಬಾ" ಎಂದು ಕರೆದು ಸೈಕಲ್ ಒಳಕ್ಕೆ ಇಡಲೂ ಬಿಡದೆ ಆಫೀಸಿಗೆ ಬೀಗ ಹಾಕಲೂ ಅವಕಾಶ ನೀಡದೆ ಬಂದಿಸಿದರು. ಆಗಸ್ಟ್ ೧೦ ರಿಂದ ಸ್ಥಾನಬದ್ಧರಾಗಿದ್ದರು. ತದನಂತರ ಕೆಲ ದಿನಗಳಲ್ಲಿ ಬಂಧಿತರಾಗಿ ಬಂದ ಎಂ.ಎನ್.ರಾಘವೇಂದ್ರ (ಈಗ ಡಿವಿಜಿ ರಸ್ತೆಯ ಪ್ರತಿಭಾ ಸ್ಟೋರ್ಸ್ ಮಾಲೀಕರು) ಇಬ್ಬರೂ ಟೆರ್ರರ್ ಆಗಿದ್ದರು. ಹೀಗಾಗಿ ೭–೮ ದಿನಗಳಲ್ಲಿ ಅವರನ್ನು ಹಾಸನ ಜಿಲ್ಲೆಗೆ ವರ್ಗಾಯಿಸಿದರು. "ನಾವು ಸ್ವತಂತ್ರರು; ನಮ್ಮನ್ನು ಅಪಹರಿಸಿ ತಂದಿದ್ದಾರೆ. ನಾವು ಕಾಂಗ್ರೆಸ್ಸಿಗರಲ್ಲ" ಎಂದು ಶಿವಮೂರ್ತಿ ಹಾಗೂ ರಾಘು ಹಾಸನ ಜೈಲಿನ ಹೊರಗೋಡೆ ಏರಿ ಭಾಷಣ ಮಾಡಿದರು. ಹೊರಗಡೆ ನೂರಾರು ಸಾರ್ವಜನಿಕರು ಸೇರಿದ್ದರು. ಜನರ ಮೇಲೆ ಲಾಠಿ ಚಾರ್ಜ್ ಆಗುವ ಪ್ರಸಂಗ ತಪ್ಪಿಸಲು ಕೆಳಗಿಳಿದರು. ಆ ಘಟನೆಯಿಂದಾಗಿ

ಬೆಂಗಳೂರಿನಿಂದ ರಿಸರ್ವ್ ಪೊಲೀಸರನ್ನು ಹಾಸನಕ್ಕೆ ಕರೆತರಬೇಕಾಯಿತು. ಮುಂದೆ ೮–೧೦ ದಿನಗಳಲ್ಲಿ ಮತ್ತೆ ಬೆಂಗಳೂರಿಗೇ ಕರೆತಂದರು. ಆ ಕಾಲದಲ್ಲಿ ಪ್ರಭುದೇವ್ ಜೈಲಿನಿಂದ ತಪ್ಪಿಸಿಕೊಳ್ಳಬೇಕೆಂದಾಗ, ಕಾಂಪೌಂಡ್ ಮೂಲೆಯ ಒಂದು ಮರಕ್ಕೆ ಹಗ್ಗ ಕಟ್ಟಿ, ರಾತ್ರಿ ದೀಪ ಆರುವಾಗಲೇ ಅವರಿಗೆ ಹಗ್ಗದ ನೆರವಿನಿಂದ ಪಾರಾಗಲು ನೆರವಾದರು. ಮುಂದೆ ೭–೮ ದಿನಗಳಲ್ಲಿ ಮತ್ತೆ ಬಂಧಿಸಲ್ಪಟ್ಟರು.

೧೯೪೨ ರ ಜನವರಿ ೨೬ ಕ್ಕೆ ಕಮಲಾದೇವಿ ಚಟ್ಟೋಪಾಧ್ಯಾಯರು ಬಂದು ಧ್ವಜಾರೋಹಣ ಮಾಡುತ್ತಾರೆ ಎಲ್ಲರೂ ಹಾಜರಿರಬೇಕು ಎಂದು ಹಿಂದಿನ ದಿನ ಜೈಲಿನಲ್ಲಿ ಟಾಂಟಂ ಮಾಡಿದರು. ವಾಸ್ತವವಾಗಿ ಜೈಲಿನಲ್ಲಿ ಮಹಿಳಾ ಬ್ಯಾರಕ್‌ನಲ್ಲಿ ಅವರಿದ್ದು, ಅವರಿಗೆ ಧ್ವಜಾರೋಹಣದ ವಿಚಾರ ತಿಳಿದೇ ಇರಲಿಲ್ಲ. ಅಂಥ ಪೂರ್ವಯೋಜನೆ ಇರಲಿಲ್ಲ. ಹೊತ್ತಿಗೆ ಸರಿಯಾಗಿ ೮೦೦ ಜನ ಸೇರಿದರು. ಕಮಲಾದೇವಿ ಬರಲಿಲ್ಲ. “ಬಹುಶಃ ಅವರನ್ನು ಬಿಟ್ಟಿರಲಿಕ್ಕಿಲ್ಲ. ನಾವು ಕರೆದು ತರುತ್ತೇವೆ” ಎಂದು ಶ್ರೀಧರಮೂರ್ತಿ, ರಘು ಹಾಗೂ ಇನ್ನೊಬ್ಬರು – ಹೀಗೆ ಮೂವರೂ ಒಟ್ಟಾಗಿ ಹೊರಟರು. ಇಡೀ ಪಟಾಂಗಣ ಸುತ್ತಿ ಸಿಂಪಲ್ ಬರಾಕ್ ಬಳಿ ಹೋದಾಗ ಜೈಲರ್ ಅಮೀರ್ ಅವರನ್ನು ತಡೆದರು. ರಿವಾಲ್ವರ್ ಹೊರತೆಗೆದು ಒಂದು ಹೆಜ್ಜೆ ಮುಂದಿಟ್ಟರೆ ಗುಂಡು ಹಾರಿಸುವುದಾಗಿ ದೃಢವಾಗಿ ಹೇಳಿದರು. ಶ್ರೀಧರಮೂರ್ತಿಯವರು ಮುಂದೆ ಹೋಗುವುದೇ ಖಂಡಿತವೆಂದು ಪಟ್ಟು ಹಿಡಿದರು. ಪರಿಸ್ಥಿತಿ ನಾಟಕೀಯವಾಗಿತ್ತು. “ಏಕ್ ಕದಂ ಆಗೇ” ಎಂದು ಮುಂದೆ ನಡೆದರು. ಅಮೀರ್ ರಿವಾಲ್ವರ್ ಕೆಳಕ್ಕೆಸೆದು, ಅವರನ್ನು ತಬ್ಬಿಕೊಂಡು “ನಡಿ ಶ್ರೀಧರ್” ಎಂದು ಆಫೀಸರ್ ಕೊಠಡಿಗೆ ಕರೆದೊಯ್ದ. ಅಲ್ಲಿ ವಿ.ಎಸ್.ನಾರಾಯಣರಾವ್, ಎನ್.ಕೇಶವ ಅಯ್ಯಂಗಾರ್ ಇವರ ಮಧ್ಯಸ್ಥಿಕೆ ಆಗಿ, ಕಮಲಾದೇವಿಯವರನ್ನು ಕರತರಬೇಕೆಂದು ನಿರ್ಧಾರವಾಯಿತು. ಆ ಕಾರ್ಯಕ್ರಮದ ವಿಚಾರ ಕಮಲಾದೇವಿಯವರಿಗೆ ತಿಳಿಯದು. ಆದರೆ ಹೊರಗೆ ಆದ ಗಲಾಟೆಯಿಂದ ವಿಷಯವೆಲ್ಲ ಅವರಿಗೆ ತಿಳಿದುಹೋಗಿತ್ತು. ಶ್ರೀಧರಮೂರ್ತಿಯವರಂತೂ ಅವರನ್ನು ಮೊದಲು ಕಂಡೇ ಇರಲಿಲ್ಲ. “ಧ್ವಜ ಏರಿಸಲು ಏಕೆ ಬರಲಿಲ್ಲ” ಎಂದರು. “ನಾನೇ ಬರಲಾಗುತ್ತದೆಯೇ, ಇದು ಜೈಲಲ್ಲವೇ? ಮಹಿಳೆಯರ ವಿಭಾಗದಲ್ಲಿ ಧ್ವಜ ಏರಿಸಿದೆವು” ಎಂದರು. “ಈಗ ಕರೆದು ತನ್ನಿ” ಎಂದು ಅಮೀರ್‌ಗೆ ಹೇಳಿದರು. ಆ ದಿನ ಬೇಡ ಎಂದು ಆತ ಕಾಲು ಹಿಡಿದು ಕೇಳಿಕೊಂಡ. ಮರುದಿನ ಬೆಳಿಗ್ಗೆ ಬರುವಂತೆ ಕಮಲಾದೇವಿಯರನ್ನು ಕೇಳಿಕೊಂಡರು. “ನಾನು ನಮ್ಮ ಬರಾಕ್ ಮುಂದೆ ಧ್ವಜ ಹಿಡಿದು ನಿಲ್ಲುತ್ತೇನೆ, ನೀವೆಲ್ಲ ಮಾರ್ಚ್‌ಪಾಸ್ಟ್ ಮಾಡಿ” ಎಂದು ಕಮಲಾದೇವಿ ಹೇಳಿದರು. “ಸ್ಲೋಗನ್ಸ್ ಹಾಕಬಾರದು” ಎಂಬ ಷರತ್ತು ಹಾಕಿ ಅಮೀರ್ ಒಪ್ಪಿಗೆ ನೀಡಿದರು. ಅನೇಕ ನಾಯಕರು ವಿರೋಧ ಮಾಡಿದರೂ ಮರುದಿನ ಆ ಕಾರ್ಯಕ್ರಮ ಯಶಸ್ವಿಯಾಯಿತು. ಆ ಸುದ್ದಿ ನಗರದಲ್ಲಿ ತಿಳಿದು ಜೈಲಿನ ಹೊರಗಡೆ ಜನ ಸೇರಿ ಜಯಘೋಷ ಮಾಡಿದರು. ರೋಮಾಂಚನ ಈ ಕಥನ!



೧೯೨೦ ರಲ್ಲಿ ಬೆಂಗಳೂರಿನಲ್ಲಿ ಮೊಟ್ಟಮೊದಲು ಕಾಂಗ್ರೆಸ್ ಆರಂಭವಾಯಿತು. ಕೆ.ರಂಗಯ್ಯಂಗಾರ್, ತಾಳೆಕೆರೆ ಸುಬ್ರಹ್ಮಣ್ಯ ಹಾಗೂ ಎಸ್.ಕೆ.ಸೆಟ್ಲೂರ್ ಈ ತ್ರಿಮೂರ್ತಿಗಳ ಮುಂದಾಳತ್ವದಲ್ಲಿ ತುಮಕೂರಿನಲ್ಲಿ ಇದರ ನಂತರ ಕಾಂಗ್ರೆಸ್ ಸ್ಥಾಪನೆಯಾಗಿ ಉತ್ತಮ ಕೆಲಸ ಮಾಡುತ್ತಿತ್ತು. ರಾಷ್ಟ್ರೀಯ ಕಾಂಗ್ರೆಸ್ಸಿನ ಬೆಂಗಳೂರು ಶಾಖೆಗೆ ಎಸ್.ಎಂ.ಎನ್.ರಜ್ಜಿ, ಕೆ.ಟಿ.ಭಾಷ್ಯಂ, ಎಲ್.ಎಸ್.ರಾಜು, ಬಿ. ಎಸ್.ರಾಮಸ್ವಾಮಿ ಅಯ್ಯಂಗಾರ್, ಕೆ.ಶಾಮರಾಜ ಅಯ್ಯಂಗಾರ್ ಇವರೆಲ್ಲರೂ ಅಧ್ಯಕ್ಷರಾಗಿದ್ದರು. ರಜಾದಿನಗಳಲ್ಲಿ ವಿ.ಎಸ್.ನಾರಾಯಣರಾಯರು ಕಾರ್ಯದರ್ಶಿಯಾಗಿ ಇತರ ಸ್ನೇಹಿತರೊಂದಿಗೆ ಬೇರೆ ಬೇರೆ ಊರುಗಳಲ್ಲಿ ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ ಊರಲ್ಲಿ ಸುತ್ತಾಡಿ ಸಂಜೆ ಸಭೆ ಸೇರಿಸುತ್ತಿದ್ದರು. ಬೆಂಗಳೂರಿನ ಸುತ್ತಮುತ್ತಲಿನ ಊರುಗಳಲ್ಲಿ ನಡೆಯುತ್ತಿದ್ದ ಸಂತೆ, ಜಾತ್ರೆ, ರಥೋತ್ಸವಗಳಿಗೂ ಹೋಗಿ ಖಾದಿ, ಪಾನನಿರೋಧ, ಮೊದಲಾದ ರಚನಾತ್ಮಕ ಕಾರ್ಯಗಳಲ್ಲಿ ತೊಡಗುತ್ತಿದ್ದರು. ಬೆಂಗಳೂರಿನ ಕರಗ ಉತ್ಸವವನ್ನು ಬಳಸಿಕೊಳ್ಳುತ್ತಿದ್ದರು. ಕೆಲವು ಸಲ ಲಾವಣಿ ನೀಲಕಂಠಪ್ಪನವರು ಜೊತೆಗೂಡುತ್ತಿದ್ದರು. ಒಮ್ಮೆ ಕಾನಕಾನಹಳ್ಳಿ, ಆನೇಕಲ್, ಚನ್ನಪಟ್ಟ ಇಲ್ಲಿ ಅಬ್ಕಾರಿ ಹರಾಜು ದಿನ ಹರಾಜಿನಲ್ಲಿ ಯಾರೂ ಭಾಗವಹಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿಸಿದರು. ಹೀಗೆ ಮೇಲ್ಕಂಡ ಮಹನೀಯರು ಸ್ವತಂತ್ರ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುತ್ತಾರೆ.

ಕೊನೆಯದಾಗಿ, ಎಚ್.ನರಸಿಂಹಯ್ಯನವರು ಬರೆದಿರುವ ಈ ಕೆಳಕಂಡ ಮಾತುಗಳಿಂದ ಈ ಕೃತಿಯನ್ನು ಸಂಪನ್ನಗೊಳಿಸುತ್ತಿದ್ದೇನೆ: "ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಕಡಿಮೆಯಾಗಿ, ಸ್ವಾಭಿಮಾನದಿಂದ ಕೂಡಿದ, ಸುಸಂಬದ್ಧವಾದ ಶಿಕ್ಷಣ ಪದ್ಧತಿಯಿಂದ ಕೂಡಿದ ಮತ್ತು ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುವ ದೇಶವಾಗುತ್ತದೆ ಎಂದು ಭಾವಿಸಿದ್ದೆವು. ಆದರೆ, ಆ ಕನಸು ಕಲ್ಪನೆಗಳೆಲ್ಲ ಬಹುತೇಕ ಮಣ್ಣುಪಾಲಾಗಿವೆ. ಅಡಿಯಿಂದ ಮುಡಿಯತನಕ ಭ್ರಷ್ಟಾಚಾರ ಸಮಾಜದಲ್ಲಿ ವ್ಯಾಪಕವಾಗಿ ಹಬ್ಬಿದೆ. ಹಣಕ್ಕೆ ಎಲ್ಲೂ ಇಲ್ಲದ ಪ್ರಮುಖ್ಯತೆ ಬಂದು, ಮೌಲ್ಯಗಳು ಕುಸಿದು ಬಿದ್ದಿವೆ. ಈ ಜಾಡ್ಯ ಸ್ವಾತಂತ್ರ್ಯ ಯೋಧರಲ್ಲೂ ದೇಶಾಭಿಮಾನಿಗಳಲ್ಲಿಯೂ ನುಸುಳಿ ಹೊಕ್ಕಿದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡಲಿಚ್ಚಿಸುತ್ತೇನೆ. ಕ್ವಿಟ್ ಇಂಡಿಯಾ ಚಳುವಳಿಗಿಂತ ಹಿಂದೆ ನಡೆದ ಒಂದು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಒಬ್ಬ ಸ್ವಾತಂತ್ರ್ಯ ಯೋಧರು. ಆಮೇಲೆ ನಾಲ್ಕಾರು ಮನೆ, ಆಸ್ತಿ ಮತ್ತು ಸಮಾಜದಲ್ಲಿ ಸ್ಥಾನವನ್ನು ಪಡೆದರು (ಅವರು ಈಗ ಇಲ್ಲ). ಅವರು ನನಗೆ ಹಲವು ದಶಕಗಳಿಂದ ತಿಳಿದವರು. ಅವರು ನನ್ನೊಂದಿಗೆ ಒಂದು ದಿನ ಪ್ರಾಸಂಗಿಕವಾಗಿ ಮಾತನಾಡುತ್ತಿದ್ದಾಗ, "ನೀವು ಸ್ವಾತಂತ್ರ್ಯಯೋಧರ ಮಾಶಾಸನವನ್ನು ತೆಗೆದುಕೊಳ್ಳುತ್ತಾ ಇದ್ದೀರಾ" ಎಂದು ಕೇಳಿದರು. ಇಲ್ಲ ಎಂದು ಹೇಳಿದೆ. "ನಾನು ತೆಗೆದುಕೊಳ್ಳುತ್ತ ಇದ್ದೀನಿ, ನೀವೂ ತೆಗೆದುಕೊಳ್ಳಿ" ಎಂದು ಹೇಳಿದರು. ಅದಕ್ಕೆ ನಾನು, "ನನಗೆ ಊಟಕ್ಕೆ ಆಗುವಷ್ಟು ಹಣವಿದೆ. ಅಲ್ಲದೆ ನಾವೆಲ್ಲಾ ಅಂದು ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸಿದ್ದು ಕರ್ತವ್ಯಪಾಲನೆಗಾಗಿ. ಅದಕ್ಕೆ ಪ್ರತಿಫಲವಾಗಿ ಇಂದು ಮಾಶಾಸನವನ್ನೋ ಅಥವಾ ಇನ್ನಾವುದೋ ಸೌಲಭ್ಯವನ್ನೋ ಪಡೆಯುವುದಕ್ಕಾಗಿ ಅಲ್ಲ. ಜೈಲಿಗೆ ಹೋದದ್ದು ಒಂದು ಲೇವಾದೇವಿ (Encashment) ಆಗಬಾರದು. ಸ್ವಾತಂತ್ರ್ಯಯೋಧರ ಮಾಶಾಸನದ ವ್ಯವಸ್ಥೆ ತುಂಬಾ ಬಡವರಿಗಾಗಿ ಮಾಡಿದ್ದು" ಅಂದೆ. ಅವರಿಗೆ ಮುಖದ ಮೇಲೆ ಹೊಡೆದ ಹಾಗಾಯಿತು, ಮುಖ ಪೆಚ್ಚಾಯಿತು. ಇಂತಹ ನಿದರ್ಶನಗಳಿಗೇನೂ ಕೊರತೆಯಿಲ್ಲ. ಜೈಲಿಗೆ ಹೋದದ್ದನ್ನು, ಹೋಗದೇ ಇದ್ದದ್ದನ್ನು ಸಾಕಷ್ಟು ಜನ ದುರುಪಯೋಗಪಡಿಸಿಕೊಂಡಿದ್ದಾರೆ. ಎಲ್ಲಿಯವರೆಗೆ ಸೇವೆಗೆ, ಕರ್ತವ್ಯಪ್ರಜ್ಞೆಗೆ, ಮೌಲ್ಯಕ್ಕೆ, ಗಾಂಧೀಜಿಯವರ ಮೂಲ



ತತ್ವಗಳಿಗೆ ನಾವು ಆದ್ಯತೆ ಕೊಡುವುದಿಲ್ಲವೋ, ಅಲ್ಲಿಯ ತನಕ ನಮ್ಮ ದೇಶಕ್ಕೆ ಉಳಿಗಾಲವಿಲ್ಲ".

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಮ್ಮ ಪ್ರತಿಜ್ಞೆ: "ರಾಷ್ಟ್ರದ ಸಮಗ್ರತೆ, ಏಳಿಗೆ, ಆತ್ಮನಿರ್ಭರತೆ, ರಾಷ್ಟ್ರೀಯತೆ, ರಾಷ್ಟ್ರಭಕ್ತಿಗಳಿಂದ ತಾಯಿ ಭಾರತಿಯನ್ನು ಸೇವಿಸೋಣ, ನಮಿಸೋಣ. ತಾಯಿ ಭಾರತಿಯ ಪದ ತಲಗಳಲ್ಲಿ ನಮ್ಮ ಶಿರವಿಟ್ಟು, ನಿಷ್ಠೆಯಿಂದ ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗೋಣ".

**"ಜಯತು ಭಾರತಮಾತಾ ಜಯತು"**

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |